ವಿಧಾನ ಸೌಧದ ಶಾಖೆಯ 8252ನೇ ನಂಬರ್‌ನ ಉಳಿತಾಯ ಖಾತೆಯಲ್ಲಿರುವ ಅಸಲು ಬಡ್ಡಿ ಸೇರಿ ಒಟ್ಟು 1,72,160 ರೂಪಾಯಿ 60 ಪೈಸೆ ನೈತಿಕವಾಗಿ ಕಳಂಕಿತವಾದ ಹಣ. ಇದನ್ನು ಯಾವುದೇ ಒಂದು ವರ್ಗ ಬಳಸಿಕೊಳ್ಳುವುದು ಖಂಡಿತ ಸಲ್ಲದು. ಸಮಾಜದ ಎಲ್ಲಾ ವರ್ಗದ ಜನರಿಗೂ ಸಲ್ಲುವಂತೆ ಈ ಹಣವನ್ನು ರಾಜ್ಯ ಸರ್ಕಾರದ ಲೆಕ್ಕಕ್ಕೆ ಜಮಾ ಮಾಡುವುದು ನನ್ನ ದೃಷ್ಟಿಯಲ್ಲಿ ನ್ಯಾಯ ಸಮ್ಮತ ಮಾತ್ರವಲ್ಲ, ಔಚಿತ್ಯಪೂರ್ಣವೂ ಹೌದು. ನಾಳೆಯೇ ಈ ಕಾರ್ಯ ಆಗಿ ನಮ್ಮ ಮೇಲಿರುವ ಈ ಋಣಭಾರದಿಂದ ಮುಕ್ತವಾಗಬೇಕೆನ್ನುವುದು ನನ್ನ ತೀರ್ಮಾನ.

ಶ್ರೀ ವಾಟಾಳ್ ನಾಗರಾಜ್ : ಅಂದರೆ ಈ ಹಣವನ್ನು ಸರ್ಕಾರದ ಕಡೆಗೆ ಕಳುಹಿಸಿ ಬಿಡುತ್ತೀರಿ?

ಅಧ್ಯಕ್ಷರು : ಇದನ್ನು ಸರ್ಕಾರದ ಲೆಕ್ಕಕ್ಕೆ ಜಮಾ ಮಾಡಲಾಗುತ್ತದೆ.

ಶ್ರೀ ಜಿ.ಎಸ್. ಆಚಾರ್ : ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ ಈ ಹಣವನ್ನು ಜಮಾ ಮಾಡಲಾಗುವುದೆಂದು ಕಾಣುತ್ತದೆ.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪ

Prohibiting display of any flag other than the National flag.

Sri B.I . Patil : Sir, I want your permission.

Mr. Speaker : I have given you permission.

Sri B.I . Patil : Sir, the Government have passsed a Bill prohibiting display of any flag other than the National flag:

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ಕಾಯಿದೆ ಮುಗಿದು ಹೋಗಿದೆ. ಇವರು ಆಗ ಮಾತನಾಡಬೇಕಾಗಿತ್ತು, ಈಗ ಉದ್ಭವವಾಗತಕ್ಕ ಪ್ರಶ್ನೆಯೇ ಇಲ್ಲ, ಇದು ಈಗ ಉದ್ಭವವಾಗುವುದಿಲ್ಲ, ಮತ್ತು ಎಂ.ಇ.ಎಸ್.ನವರು ಪ್ರಚಾರ ಪಡೆಯುವುದಕ್ಕೆ ಈ ರೀತಿ ಮಾಡುತ್ತಿದ್ದಾರೆ. ಇದು ಸರಿಯಾದ ನೀತಿ ಅಲ್ಲ, ಈಗ ಮಾತನಾಡುವುದು ಔಚಿತ್ಯವೂ ಅಲ್ಲ, ಏಕೆಂದರೆ....

(INTERRUPTIONS)

ಶ್ರೀ ವಾಟಾಳ್ ನಾಗರಾಜ್ : ಆ ದಿನ ಅವರು ಸಭೆಯಲ್ಲಿ ಇರಲಿಲ್ಲ, ಈಗಾಗಲೇ ಇದು ಸರ್ವಾನುಮತದಿಂದ ತೀರ್ಮಾನವಾಗಿದೆ. ಇವರು 4 ಜನರಲ್ಲಿ, ಮೂವರು ಇಂದು ಪೇಟ ಹಾಕಿಕೊಂಡು ಬಂದಿದ್ದಾರೆ, ಇನ್ನೊಬ್ಬರು ಪೇಟ ಹಾಕಿರುವುದಿಲ್ಲ, ಅಂದರೆ ಅವರಲ್ಲಿಯೇ ಸರಿಯಾದ ಹೊಂದಾಣಿಕೆ ಇಲ್ಲ, ಇವರು ನಾಟಕ ಆಡುತ್ತಿದ್ದಾರೆ. ಈಗ ಇದಕ್ಕೆ ತಾವು ಅವಕಾಶ ಕೊಡುವುದಕ್ಕೆ ಬರುವುದಿಲ್ಲ, ಆ ದಿನ ಇವರುಗಳು ಸಭೆಗೆ ಬಂದಿರಲಿಲ್ಲ.

Sri B.I. Patil : Mr. Speaker sir.

Mr. Speaker : Where were you when the question came up in the Assembly?

Sri B.I. Patil : I walked out on that day

Mr. Speaker : Why did you walk out?

(INTERRUPTIONS)

Mr. Speaker : Would you kindly listen to me? This question was not a decision of the Government. A Bill was placed. A Bill was moved. A Bill was considered and the bill was passed and it was passed unanimously without a debate.

Sri B.I. Patil : Only on that day, it was introduced and it was purposefully done. It was in Kannada. We don't know Kannada.

ಶ್ರೀ ವಾಟಾಳ್ ನಾಗರಾಜ್ : ಆ ದಿನ ಇವರು ಸಭೆಗೆ ಬಂದಿರಲಿಲ್ಲ.

(INTERRUPTIONS)

Mr. Speaker : In the light of this, your question is....

(INTERRUPTIONS)

Mr. Speaker : You are trying to question the collective wisdom of this House. I will not allow you to do it.

There is also English copy of the Bill.

(INTERRUPTIONS)

Mr. Speaker : You have no cause of action atleast within the House.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಇಂದು ಮೂರು ಜನ ಪೇಟ ಹಾಕಿಕೊಂಡು ಬಂದಿದ್ದಾರೆ. ಇನ್ನೊಬ್ಬರು ಹಾಕಿಕೊಂಡು ಬಂದಿಲ್ಲ. ಇದೇನೋ ನಾಟಕ ಇದೆ ಇವರದ್ದು. ಮಾಸೂದೆ ಪಾಸ್‌ಆಗುವಾಗ ನೀವು ಎಲ್ಲಿದ್ದಿರಿ ಎಂದು ತಾವು ಅವರಿಗೆ ಕೇಳಿದ್ದೀರಿ. ಇದು ಸರಿ ಇದೆ. ಆಗ ಎಲ್ಲೋ ಹೋಗಿ, ಈಗ ಪೇಟ ಹಾಕಿಕೊಂಡು ಬಂದಿದ್ದಾರೆ.

(All the four Independent members were standing)

Mr. Speaker : Would you kindly resume your seat?

I cannot allow if four of you stand simultaneously.

(ಗೊಂದಲ)

Mr. K.C. Modgekar Desai : I would like to quote Article 372 of the Constitution..

Mr. Speaker : What have you trying to do?

Sri. K.C. Modgekar Desai : I am going to quote the Constitution of India.

Mr. Speaker : Under what provision of the rules?

Sri. K.C. Modgekar Desai : The House has passed that Bill but it is Unconstitutional.

Mr. Speaker : Hon. member can you go to Court.

Sri K. C. Modgekar Desai : Definitely I will go, but kindly allow me to mention some legal points.

Mr. Speaker : You don't need neither the Speaker's permission nor the permission of the House to go to the Court.

Sri. K.C. Modgekar Desai : I have already applied for that permission.

(ಗೊಂದಲ)

Mr. Speaker : I have received your letter but I am afraid I will not be within the framework of the rules which we ourselves have framed to give you permission.

Sri. K.C. Modgekar Desai : If you allow, I will speak.

Mr. Speaker : I am afraid my hands are tied.

Sri. K.C. Modgekar Desai : It is Unconstitutional.

Mr. Speaker : You should have raised it as a preliminary objection when the Bill was taken up.

Sri B. I. Patil : You have taken a premature decision.

Mr. Speaker : Who has taken the premature decisions?

Sri. K.C. Modgekar Desai : The House has taken.

(INTERRUPTION)

ಶ್ರೀ ವಾಟಾಳ್ ನಾಗರಾಜ್ : ಇದು ಈ ಸದನಕ್ಕೆ ಅಗೌರವ ಮಾಡಿದಹಾಗೆ ಆಗುತ್ತದೆ. ಇದು ಸರಿಯಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇಡೀ ಸದನಕ್ಕೆ ಇವರು ಅವಮಾನ ಮಾಡುತ್ತಿದ್ದಾರೆ. ಇದು ಸರಿಯಲ್ಲ.

ಶ್ರೀ ವಾಟಾಳ್ ನಾಗರಾಜ್ : ಇವರು ಇಡೀ ಸದನವನ್ನೇ ಪ್ರಶ್ನೆ ಮಾಡುತ್ತಿದ್ದಾರೆ, ಸದನದ ನೀತಿಯನ್ನು ಸಾರ್ವಭೌಮತೆಯನ್ನು ಪ್ರಶ್ನೆ ಮಾಡುತ್ತಿದ್ದಾರೆ. ಇದು ಸರಿಯಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ಇದಕ್ಕೆ ಅನುಮತಿ ನೀಡಬಾರದು.

Mr. Speaker :The letter which you have addressed to-day it was received in my office at 10-50 a.m. this morning just ten minutes before we assemble. You have made a mention that the Bill which has been passed, according to you, is beyond the purview of the legislative competence of this House. What I was going to suggest was when this question came up, when this Bill was taken into consideration on the 16 th by this August House, (a) as a member of this August House, you should have been present here and it was your duty to be present here and then to raise a preliminary objection questioning the legislative competence of this House to pass a bill like this. (b) You said it is unconstitutional. You could have also raised that plea that this is unconstitutional. You don't do either of the two things and now you come up to-day i.e., 18th March at 10-50 a.m. raising objections on the bill which the House has already passed. You suddenly realised that this is Unconstitutional

and that this House has no legislative competence to enact a bill like this. So, I am afraid, I am helpless.

Sri. K.C. Modgekar Desai : It is not publishing in the agenda and in the Gazette. It is concerning the public.

Sri B.I.Patil : We don't know kannada. it was in Kannada.

ಶ್ರೀ ವಾಟಾಳ್ ನಾಗರಾಜ್ : ಈ ರಾಜ್ಯದಲ್ಲಿರುವವರೆಲ್ಲರೂ ಕನ್ನಡ ಕಲಿಯಬೇಕು.

Mr. Speaker : It was also in English.

(INTERRUPTIONS)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಸರಿಯಲ್ಲ... ಇದು ಸರಿಯಲ್ಲ.... ಅವರು ಕನ್ನಡ ಕಲಿಯಬೇಕು.... ಅವರು ನಾಟಕ ಆಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇವರು ಎಂ.ಇ.ಎಸ್.ನವರು ಅಲ್ಲ... ಅಲ್ಲಿನ ಮರಾಠಿಗರನ್ನು ಸಂತೋಷಪಡಿಸಲು ಇಲ್ಲಿ ಇವರು ಈ ರೀತಿ ನಾಟಕ ಮಾಡುತ್ತಿದ್ದಾರೆ. ಇದು ಸರಿಯಲ್ಲ...

(ಗೊಂದಲ)

ಅಧ್ಯಕ್ಷರು : ಮಾನ್ಯ ಡಿ.ಬಿ. ಚಂದ್ರೇಗೌಡರೇ ತಾವು ಮಾತನಾಡಿ..

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ....

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ರಾಜ್ಯದಲ್ಲಿ ಡಕಾಯಿತಿಗಳನ್ನು ನಿಯಂತ್ರಣಾ ಮಾಡುವುದರಲ್ಲಿ ಸರ್ಕಾರ ವಿಫಲವಾಗಿರುವ ಬಗ್ಗೆ ಗೃಹಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

(ಶ್ರೀ ಬಿ.ಐ. ಪಾಟೀಲ್ ಮತ್ತಿತರ ಅವರ ಪಕ್ಷದ ಶಾಸಕರು ಈ ಹಂತದಲ್ಲಿ ಧರಣಿ ನಡೆಸಿದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಎಂ.ಇ.ಎಸ್.ನವರಿಗೆ ಧಿಕ್ಕಾರ

(ಗೊಂದಲ)

ಶ್ರೀ ಬಿ.ಐ.ಪಾಟೀಲ್ : ವಾಟಾಳ್ ನಾಗರಾಜ್‌ರವರಿಗೆ ಧಿಕ್ಕಾರ...

ಶ್ರೀ ವಾಟಾಳ್ ನಾಗರಾಜ್ : ನೋಡಿ ಸ್ವಾಮಿ ಅವರಿಗೆ ಕನ್ನಡ ಬರುತ್ತದೆ...

(ಗೊಂದಲ)

ಅಧ್ಯಕ್ಷರು : ವಾಟಾಳ್ ನಾಗರಾಜ್ ಎನ್ನುವುದಕ್ಕೆ ಬೇರೆ ಪದ ಟ್ರಾನ್ಸ್‌ಲೇಶನ್‌ನಲ್ಲಿ ಇಲ್ಲ. ಯಾವ ಭಾಷೆಯಲ್ಲಾದರೂ ವಾಟಾಳ್ ನಾಗರಾಜ್ ಎಂದೇ ಹೇಳಬೇಕು. ಇನ್ನು ಧಿಕ್ಕಾರ ಎಂಬ ಪದ ಕನ್ನಡ ಎಂದು ಅವರೇ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಅವರು ಈ ಸಭೆಯಲ್ಲಿ ದರಣಿ ಕುಳಿತುಕೊಳ್ಳತಕ್ಕಂಥಾದ್ದು ಸರಿಯಲ್ಲ. ಪ್ರಾಮಾಣಿಕವಾಗಿ ಈ ಸಭೆಯಲ್ಲಿ ಒಂದು ನಿರ್ಣಯ ಪಾಸ್ ಮಾಡಿ....

(ಗೊಂದಲ)

ಅಧ್ಯಕ್ಷರು : ನಾನು ಈ ಧರಣಿ ವಿಚಾರದಲ್ಲಿ ತಮ್ಮ ಕನ್ಸಿಡರ್ ಒಪಿನಿಯನ್ ಕೇಳಬೇಕೆಂದು ಇದ್ದೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಈ ವಿಚಾರದಲ್ಲಿ ತಮ್ಮ ಕನ್ಸಿಡರ್ ಒಪಿನಿಯನ್ ಏನು ಎಂದು ದಯವಿಟ್ಟು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಧರಣಿ ಯಾವುದಕ್ಕೆ ಕುಳಿತುಕೊಳ್ಳಬೇಕು ಯಾವುದಕ್ಕೆ ಧರಣಿ ಕುಳಿತುಕೊಳ್ಳಬಾರದು ಎನ್ನುವುದನ್ನು ನಿರ್ಧಾರ ಮಾಡಿಕೊಳ್ಳಬೇಕು ಈಗ ಅವರು ಉದ್ದೇಶ ಪೂರ್ವಕವಾಗಿ ಧರಣಿ ಕುಳಿತುಕೊಂಡಿದ್ದಾರೆ. ಇದು ಕೇವಲ ನಾಟಕ. ನಾನು ಅನೇಕ ಸಲ ಧರಣಿ ಕುಳಿತುಕೊಂಡಿದ್ದೇನೆ. ತಮ್ಮ ಹಿನ್ನೆಲೆಯನ್ನು ನಾನು ಅರ್ಥ ಮಾಡಿಕೊಂಡೆ. ಆದರಲ್ಲಿ ನಾನು ಜವಾಬ್ದಾರಿಯುತವಾಗಿ ಯಾವುದು ಪ್ರಾಮಾಣಿಕವಾಗಿರುತ್ತದೆಯೋ ಅಂತಾದ್ದು ಇದ್ದಾಗ ಧರಣಿ ಕುಳಿತುಕೊಂಡಿದ್ದೇನೆ. ಆದರೆ ಆಗ ಕುಳಿತುಕೊಳ್ಳುವಂತಹ ಪರಿಸ್ಥಿತಿ ಇಲ್ಲ. ಈ ಸಭೆಯಲ್ಲಿ ಈ ಒಂದು ಮಸೂದೆಗೆ ಸರ್ವಾನುಮತದಿಂದ ಒಪ್ಪಿಗೆ ಸಿಕ್ಕಿದೆ. ಆದರೂ ಇವರು ಇದರ ವಿರುದ್ಧವಾಗಿ ಧರಣಿ ಕೂರುವುದು ಸರಿಯೇ?

ಅಧ್ಯಕ್ಷರು : ಸರಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಇವರು ಇಡೀ ಸದನಕ್ಕೆ ಅಗೌರವ ಮಾಡಿದ್ದಾರೆ. ಅಧ್ಯಕ್ಷರಿಗೆ ಅಗೌರವ ಮಾಡಿದ್ದಾರೆ. ಮತ್ತು ಈ ಸದನಕ್ಕೆ ಅಗೌರವ ಮಾಡಿದ್ದಾರೆಂದು ನಾನೂ ಸಹ ಧರಣಿ ಕುಳಿತುಕೊಳ್ಳುತ್ತಿದ್ದೇನೆ. ಇದು ಸರಿಯಲ್ಲ. ಇದು ಯಾರೂ ನಗುವಂತಹ ವಿಚಾರ ಸಹ ಅಲ್ಲ. ಮಾನ್ಯ ಸದಸ್ಯರಾದ ಗುರುಪಾದಪ್ಪ ನಾಗಪ್ಪಾರಪಲ್ಲಿಯವರು ಇದನ್ನು ಸ್ವಲ್ಪ ಗಂಭೀರವಾಗಿ ತೆಗೆದುಕೊಳ್ಳಬೇಕು. ಏಕೆಂದರೆ ಅವರು ಸಹ ಗಡಿ ಪ್ರದೇಶದಿಂದ ಬಂದವರು. ಈ ಸದನದಲ್ಲಿ ಒಂದು ಮಸೂದೆ ಸರ್ವಾನುಮತದಿಂದ ಒಪ್ಪಿಗೆ ಪಡೆದಿದೆ. ಆದರೂ ಇವರು ಈ ಸಂದರ್ಭದಲ್ಲಿ ಧರಣಿ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರು ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು. ತಮ್ಮ ಮಾತಿಗೆ ವಿರುದ್ಧವಾಗಿ ಧರಣಿ ಕುಳಿತಿದ್ದಾರೆ. ಇದು ಸರಿಯಲ್ಲ. ತಾವು ಈ ಬಗ್ಗೆ ಒಂದು ತೀರ್ಮಾನಕ್ಕೆ ಬರಬೇಕು. ಮಸೂದೆಗೆ ಒಪ್ಪಿಗೆ ದೊರೆತ ನಂತರ ಧರಣಿ ಕುಳಿತುಕೊಂಡಿರತಕ್ಕಂಥಾದ್ದು ಸರಿಯಲ್ಲ. ಇವರು ಮಾಡುವುದು ಅಕ್ರಮ ಇವರು ಈ ಸಭೆಯನ್ನು ಬೇರೆ ದಾರಿಗೆ ಎಳೆದುಕೊಂಡು ಹೋಗುತ್ತಿದ್ದಾರೆ. ಇದು ಕೇವಲ ನಾಟಕ.ಇದು ಪ್ರಚಾರದ ತಂತ್ರ. ಇಂತಹವರನ್ನು ಸಭೆಯಿಂದ ಹೊರಹಾಕಬೇಕು. ಈ ಮಸೂದೆ ಪಾಸಾಗುವ ದಿನ ಈ ನಾಲ್ಕು ಜನ ಮಾನ್ಯ ಸದಸ್ಯರು ಎಲ್ಲಿಗೆ ಹೋಗಿದ್ದರು ಈ ಬಗ್ಗೆ ಬೆಳಗಾಂನಲ್ಲಿ ಜನರು ನೀವು ಆ ದಿನ ಎಲ್ಲಿಗೆ ಹೋಗಿದ್ದೀರಿ ಎಂದು 3 ದಿನಗಳಿಂದ ಕೇಳಿದ ಮೇಲೆ ಇಂದು ಈ ಬಗ್ಗೆ ರಾಜಕೀಯ ಮಾಡಲು ಬಂದಿದ್ದಾರೆ. ಈ ನಾಲ್ಕು ಜನರಲ್ಲಿ 3 ಜನ ಪೇಟ ಕಟ್ಟಿದ್ದಾರೆ. ಇನ್ನೊಬ್ಬರು ಕಟ್ಟಿಲ್ಲ.

ನಿಜ ಹೇಳಬೇಕೆಂದರೆ ಇವರು ಎಂ.ಇ.ಎಸ್.ನವರೇ ಅಲ್ಲ ಅವರು ಸ್ವತಂತ್ರ ಪಕ್ಷದವರಿರಬೇಕಾಗುತ್ತದೆ. ಇಲ್ಲವೇ ಯಾವ ಪಕ್ಷ ಎಂದು ಕೇಳಬೇಕಾಗುತ್ತದೆ. ಆದ್ದರಿಂದ ಈ ನಾಟಕ ಬೇಕಾಗಿಲ್ಲ. ಇವರ ಕಥೆ ಮುಗಿದಿದೆ. ಇವರು ಮಾಡುತ್ತಿರುವ ಧರಣಿ ಅನೀತಿಯುತವಾದಂಥ ಕ್ರಮವಾಗಿದೆ. ಆದ್ದರಿಂದ ಅವರು ಧರಣಿ ಬಿಟ್ಟು ಏಳಬೇಕು. ಹಿಂದೆ ಇವರು 6 ಜನಗೆದ್ದು ಬಂದಿದ್ದರು. ಈಗ ನಾಲಕ್ಕೆ ಇಳಿದಿದೆ. ಮುಂದಿನ ಚುನಾವಣೆಯಲ್ಲಿ ಒಬ್ಬರೂ ಸಹ ಆರಿಸಿ ಬರುವುದಿಲ್ಲ. ಆದ್ದರಿಂದ ಧರಣಿ ಮಾಡುತ್ತಿರುವುದು ಇಡೀ ಸಭೆಗೆ ಅಗೌರವ ತೋರಿಸಿದಂತಾಗುತ್ತದೆ. ಅವರು ಧರಣಿ ಬಿಟ್ಟು ಏಳಲಿಲ್ಲವೆಂದರೆ ಅದರ ವಿರುದ್ಧವಾಗಿ ನಾನೂ ಧರಣಿ ಕುಳಿತುಕೊಳ್ಳಬೇಕಾಗುತ್ತದೆ.

ಬೆಳಗಾವಿಯಲ್ಲಿ ನಿಮ್ಮ ಹಣೆಬರಹವನ್ನು ನೋಡಿದ್ದೇವೆ. ಅದನ್ನು ಅವರು ಹೇಳಬೇಕಾಗಿಲ್ಲ. ಬೆಳಿಗ್ಗೆ ಒಂದು ಸಂಜೆ ಒಂದು, ಇದೆಲ್ಲಾ ನಮಗೆ ಗೊತ್ತಿದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಈ ವಿಚಾರದಲ್ಲಿ ಯಾವುದೇ ಸದಸ್ಯರ ಹಕ್ಕನ್ನು ಕಿತ್ತುಕೊಳ್ಳತಕ್ಕಂಥದ್ದಲ್ಲ. ಅವರು ತಮ್ಮ ನಿಲುವನ್ನು ಹೇಳಬೇಕಾಗಿದ್ರೆ ಅದನ್ನು ಈ ಮಸೂದೆ ಮಂಡನೆ ಮಾಡುವ ಸಮಯದಲ್ಲಿ, ಈ ಮಸೂದೆಯ ಕನ್ಸಿಡರ್ ಮಾಡುವ ಸ್ಟೇಜ್‌ನಲ್ಲಿ ಹಾಗೂ ಪಾಸ್ ಮಾಡುವಾಗ ಮಾಡಬಹುದಾಗಿತ್ತು. ಆದರೆ. ಆ ಸಂದರ್ಭದಲ್ಲಿ ಅವರು ಏಕೆ ಇರಲಿಲ್ಲವೋ ನನಗೆ ಗೊತ್ತಿಲ್ಲ. ಅವು ಸದನದಲ್ಲಿ ಇರಲಿಲ್ಲವೆಂಬ ಕಾರಣಕಾಕಗಿ ಮಸೂದೆ ಪಾಸ್ ಆಗುವುದು ನಿಲ್ಲುವುದಕ್ಕಾಗುವುದಿಲ್ಲ. ಅವರು ಇದ್ದು ಎಂದು ಮಸೂದೆಯನ್ನು ಮುಂದುವರಿಸುವುದಕ್ಕೂ ಆಗುವುದಿಲ್ಲ. ಹೀಗೆ ಒಂದು ಮಸೂದೆಯನ್ನು ಶಾಸನಬದ್ಧವಾಗಿ ಪಾಸ್ ಮಾಡುವ ಬಗ್ಗೆ ಅನೇಕ ಜನ ಸದಸ್ಯರು ಪಾಲ್ಗೊಂಡು ಆಮೇಲೆ ಮಸೂದೆಯನ್ನು ಒಪ್ಪಿಗೆಗಾಗಿ ಮತಕ್ಕೆ ಹಾಕಿದಾಗ ಒಬ್ಬರಾದರೂ ಅದರ ವಿರುದ್ಧ ಚಕಾರ ಎತ್ತಲಿಲ್ಲ. ಈಗ, ಆ ಮಸೂದೆ ಮಂಡನೆಯಾಗಿ ಪಾಸ್ ಆಗಿರುವುದು ಸರಿಯಲ್ಲವೆಂದು ಅವರು ವಾದ ಹೂಡಿದ್ದರೆ, ಅದು ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಅದು ಸದನದ ಗೌರವದ ಪ್ರಶ್ನೆ ಆಗುತ್ತದೆ. ಹಾಗೆ ಅವರು ಮಾಡಲೇಕಾದರೆ ಅದಕ್ಕೆ ಅವರಿಗೆ ಬಹಿರಂಗ ಮಾರ್ಗಗಳಿವೆ. ತಾವು ಹೇಳಿದಂತೆ ಇದರ ಬಗ್ಗೆ ಅವರು ಕೋರ್ಟಿಗೂ ಹೋಗಬಹುದು, ಕಛೇರಿಗೂ ಹೋಗಬಹುದು. ಆದ್ದರಿಂದ, ಅವರು ಈ ದಿವಸ ಮಾಡುತ್ತಿರುವ ಪ್ರತಿಭಟನೆ ಸರಿಯಲ್ಲವೆಂದು ನಾನು ಮನವಿ ಮಾಡುತ್ತೇನೆ. ಈ ಮಾರ್ಗವನ್ನು ಅವರು ಕೈಬಿಡಬೇಕು.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ , ಈ ದಿವಸ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರಾದ ನನ್ನ 4 ಜನ ಸ್ನೇಹಿತರು ಇಲ್ಲಿ ಬಂದು ಕುಳಿತಿದ್ದಾರೆ. ಇದು ಒಂದು ದೃಷ್ಟಿಯಿಂದ ರೈಲು ಹೋದ ಮೇಲೆ ಟಿಕೆಟ್ ಕೊಂಡುಕೊಂಡ ಹಾಗಿದೆ ಇವರ ನೀತಿ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ರೈಲೂ ಇಲ್ಲ, ಟಿಕೇಟೂ ಇಲ್ಲ. ಅದರ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ.

ಶ್ರೀ ಸಿ. ಬೈರೇಗೌಡ : ಏಕೆಂದರೆ ಈ ಮಸೂದೆಯಲ್ಲಿ ....

12.45 ಪಿ.ಎಂ.

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ : ಸದನದಲ್ಲಿ ತೀರ್ಮಾನ ಆದ ಮೇಲೆ...

ಶ್ರೀ ಕೆ.ಹೆಚ್. ರಂಗನಾಥ್ : ಈ ಸದನ ಈ ಕಾನೂನನ್ನು ಪಾಸ್ ಮಾಡಿದೆ. ತಾವು ಅಪ್ಪಣೆ ಕೊಡಿಸಿದ ಹಾಗೆ ಇಡೀ ಸದನ ಇಡೀ ಸದನ ಈ ಕಾನೂನನ್ನು ಸರ್ವಾನುಮತದಿಂದ ಪಾಸ್ ಮಾಡಿದೆ. ಯಾಕೆ ಅಂದರೆ ಇದಕ್ಕೆ ಒಂದು ಹಿನ್ನೆಲೆ ಕೂಡ ಇದೆ. ಈ ಒಂದು ಅಪರಾಧವನ್ನು ಮಾಡುತ್ತಾ ಇರತಕ್ಕಂತಹ ಸಮಯದಲ್ಲಿ ಈ ಸದನದಲ್ಲಿ ನಾವೆಲ್ಲಾ ಒತ್ತಾಯ ಮಾಡಿದ್ದೇವೆ. ಈ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು. ತಾವು ಕೂಡ ಅದನ್ನು ಬಹಳ ತೀವ್ರತೆಯಿಂದ ಆದೇಶ ಕೊಟ್ಟಿದ್ದೀರಿ. ಹೀಗಾಗಿ ಸರ್ಕಾರ ಶೀಘ್ರವಾಗಿ ಈ ಕಾನೂನನ್ನು ತಂದಿತ್ತು. ಇಂಟ್ರಡ್ಯೂಸ್ ಮಾಡುವಂತಹ ಸಂದರ್ಭದಲ್ಲಿ ಸಹ ಇದರ ತೀವ್ರತೆಯನ್ನು ಪರಿಗಣಿಸಿ ಅದನ್ನು ಯುನಾನಿಮಸ್ ಆಗಿ ಪಾಸ್ ಮಾಡಿದೆ. ಮಾನ್ಯ ಸದಸ್ಯರು ಇರಬೇಕು ಅಥವಾ ಇರಬಾರದು ಎಂಬುದು ಅದು ಅವರಿಗೆ ಬಿಟ್ಟಿದ್ದು. ಆದರೆ ಇವತ್ತು ಪಾಸ್ ಆಗಿದೆ.

ಪಾಸ್ ಆಗಿ ಕಾನೂನು ಆಗಿರುವಾಗ ಅದು ಅಲ್ಟ್ರಾ ವೈರಸ್ ಎಂದು ಹೇಳಿ ತಮಗೆ ಪತ್ರ ಬರೆದಿದ್ದಾರೆ. ತಾವು ಹೇಳಿದಿರಿ, ನನಗೆ ಏನೂ ಮಾಡುವುದಕ್ಕಾಗುವುದಿಲ್ಲ ಎಂದು. ಹೀಗಿರುವಾಗ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡುವುದಕ್ಕೆ ಈ ಕ್ರಮ ಅನುಸರಿಸತಕ್ಕದ್ದು ಸಾಧುವಾದುದಲ್ಲ. ಈ ರೀತಿಯಲ್ಲಿ ತೆಗೆದುಕೊಂಡು ಹೋಗತಕ್ಕದ್ದು ಇದು ಅನಾರ್ಕಿ. ಆದ್ದರಿಂದ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅವರನ್ನು ಹೊರಕ್ಕೆ ಹಾಕಿಸದೇ ಬೇರೆ ದಾರಿನೇ ಇಲ್ಲ. ಇಲ್ಲದೇ ಹೋದರೆ ಇಂತಹ ಅಕ್ರಮವನ್ನು ಈ ಸದನದಲ್ಲಿ ಮತ್ತೆ ಮತ್ತೆ ಮೇಲೆ ಮೇಲೆ ಮಾಡುವುದಕ್ಕೆ ಪ್ರಯತ್ನ ಪಡುತ್ತಾರೆ. ನಾವು ಮೂಕ ಪ್ರೇಕ್ಷಕರಾಗಿ ಇಲ್ಲಿ ಇರಬೇಕಾದಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ. ಇನ್ನು ಯಾವ ಮಾತಿಗೂ ಅವಕಾಶ ಕೊಡದಂತೆ ಮಾನ್ಯ ಸದಸ್ಯರನ್ನು ಹೊರಗೆ ಹಾಕಬೇಕು. ಈ ಸದನ ತನ್ನ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗಬೇಕು.

ಶ್ರೀ ಸಿ. ಬೈರೇಗೌಡ : ನಾನು ಆ ಮಾತನ್ನು ಏಕೆ ಹೇಳಿದೆ ಅಂದರೆ ಮಾನ್ಯ ರಂಗನಾಥ್ ಅವರು ಹೇಳಿದ ರೀತಿಯಲ್ಲಿ...

ಅಧ್ಯಕ್ಷರು : ಸ್ವಲ್ಪ ಕಂಡೆನ್ಸ್ ಮಾಡಿ...

ಶ್ರೀ ಸಿ. ಬೈರೇಗೌಡ : ಇಲ್ಲಿ ಮಾತನಾಡುವುದಕ್ಕೆ ಯಾವ ನಿರ್ಬಂಧವೂ ಇಲ್ಲ. ಅನಿಬಂಧಿತವಾದ ಹಕ್ಕು ಈ ಸದನದಲ್ಲಿ ಇದೆ. ಆದರೆ ಅದನ್ನು ಮಸೂದೆಯ ರೂಪದಲ್ಲಿ ತಂದಾಗ ಇವರಿಗೆ ಸರ್ವ ಸ್ವತಂತ್ರ ಇತ್ತು. ಆಗ ವಿರೋಧ ಮಾಡಲು ಇವರು ಸರ್ವ ಸ್ವತಂತ್ರರು ಆಗಿದ್ದರು. ಇದರ ಬಗ್ಗೆ ವಿರೋಧ ಮಾಡುವುದಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಆಗ ಸಭೆಯಲ್ಲಿರಲಿಲ್ಲ. ಇವರು ಮಸೂದೆ ಬಂದಾಗ ತಮ್ಮ ಅಭಿಪ್ರಾಯ ವ್ಯಕ್ತ ಮಾಡುವುದಕ್ಕೆ ಸ್ವತಂತ್ರರಾಗಿದ್ದರು. ಅಂತಹ ಸಂದರ್ಭವನ್ನು ಇವರು ಉಪಯೋಗಿಸಿಕೊಳ್ಳಲಿಲ್ಲ.

ಆ ಸಂದರ್ಭ ಉಪಯೋಗಿಸಿಕೊಳ್ಳದೆ ಅವಿರೋಧವಾಗಿ ಪಾಸಾಗಿ ಮಸೂದೆ ಕಾನೂನು ಆಗತಕ್ಕ ಪರಿಸ್ಥಿತಿ ಬಂದಿರುವಾಗ ಈಗ ಈ ವಿಚಾರದಲ್ಲಿ ತಕರಾರು ಹೂಡುವುದಾದರೆ ಇದಕ್ಕೆ ಏನು ಹೇಳಬೇಕು? ರೈಲ್ ಹೋದ ಮೇಲೆ ಟಿಕೆಟ್ ಕೊಂಡುಕೊಂಡರು ಎಂಬ ಮಾತನ್ನು ಹೇಳಬೇಕಾಗುತ್ತದೆ. ಆದ್ದರಿಂದ ಇದು ಸಾಧುವಾದುದು ಅಲ್ಲ. ಆದ್ದರಿಂದ ಇವರು ಅಭಿಪ್ರಾಯ ತಿಳಿಸುವುದಕ್ಕೆ ಆಗ ಈ ಅವಕಾಶ ಇತ್ತು. ಆ ಅವಕಾಶವನ್ನು ಈಗ ಕಳೆದುಕೊಂಡಿದ್ದಾರೆ. ಈ ಸದನ ಈ ಮಸೂದೆಯನ್ನು ಅವಿರೋಧವಾಗಿ ಪಾಸ್ ಮಾಡಿದ್ದು ಕೂಡ ಆಗಿದೆ. ಅಧಕ್ಕೆ ಹಿನ್ನೆಲೆ ಕೂಡ ಇದೆ. ಕಳೆದ ಹತ್ತಾರು ವರ್ಷಗಳಿಂದ ಈ ಬೆಳಗಾಂ ಸಮಸ್ಯೆ ಒಂದಲ್ಲ ಹತ್ತಾರು ಸಾರಿ ಪ್ರಸ್ತಾಪ ಆಗಿದೆ. ಅಲ್ಲಿರತಕ್ಕ ಬಾವುಟ ಇಳಿಸಬೇಕು ಎನ್ನುವ ಒತ್ತಾಯ ಕೂಡ ಈ ಭಾಗದ ಎಲ್ಲ ಸದಸ್ಯರಿಂದ ಕೂಡ ಹಿಂದೆ ಮಾಡಿದ್ದಾರೆ. ಅದು ಈ ಸದನದಲ್ಲಿ ಬಂದಂತಹ ಅಭಿಪ್ರಾಯ. ಈ ಸದನದಲ್ಲಿ ಬಂದ ಒತ್ತಾಯದ ಮೇರೆಗೆ ಈ ಸದನದಲ್ಲಿ ಬಂದಂತಹ ಅಭಿಪ್ರಾಯ. ಈಗ ಈ ಸದನದಲ್ಲಿ ಒಪ್ಪಿಗೆ ಪಡೆದ ಸಂದರ್ಭದಲ್ಲಿ ಇದು ಉಚಿತ ಅಲ್ಲ. ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕೆಂದು ಸಹ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರು ಎಂಇಎಸ್‌ನವರು ಮಾತನಾಡುತ್ತಿರುವಾಗ ಭಗವಾನ್ ಧ್ವಜದ ಬಗ್ಗೆ ಮಾತನಾಡುತ್ತಿದ್ದಾರೆ. ಈ ಭಗವಾನ್ ಧ್ವಜ ಕೇವಲ ಎಂಇಎಸ್‌ನವರದ್ದು ಮಾತ್ರ ಅಲ್ಲ. ಅದು ಇಡೀ ಭಾರತೀಯ ಧರ್ಮದ ಸಂಸ್ಕೃತಿಯ ಪ್ರತೀಕ. ಆದರೂ ಈ ಬಗ್ಗೆ ಒಂದು ಸಂಕುಚಿತ ಭಾವನೆಯಿಂದ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿ ಒಂದೊಂದು ಧ್ವಜವು ಒಂದೊಂದು ನಗರಸಭೆ ಪುರಸಭೆ ಎಲ್ಲಾ ಕಡೆ ಇಡೀ ರಾಜ್ಯದಲ್ಲಿ ಬರುವುದಕ್ಕೆ ಸಾಧ್ಯ ಇಲ್ಲ. ಇಡೀ ಸದನ

ತೀರ್ಮಾನ ಆಗಿದೆ. ಇವರು ಈ ತೀರ್ಮಾನಕ್ಕೆ ಬಗ್ಗಲೇಬೇಕು. ಇದು ಸದನವನ್ನು ಇವರು ತಪ್ಪು ದಾರಿಗೆ ತೆಗೆದುಕೊಂಡು ಹೋಗತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಇದು ಸದನಕ್ಕೆ ಅವಮಾನ ಮಾಡತಕ್ಕ ರೀತಿ ಆಗಿರುವುದರಿಂದ ಇವರ ಬಗ್ಗೆ ತುರ್ತು ಕ್ರಮ ತೆಗೆದುಕೊಳ್ಳಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಈ ವಿಷಯ ಕಳೆದ ಬಾರಿ ಬಂದಾಗ ಇದು ಸರಿಯಲ್ಲ ಎಂದು ಹೇಳಿದಾಗ ತಾವು ಬಹಳ ರೀತಿಯಲ್ಲಿ ಇದು ಸರಿಯಲ್ಲ ಎಂಬಂತಹ ವಿಚಾರವನ್ನು ನಮಗೆ ಬೋಧನೆ ಮಾಡಿದ್ದೀರಿ. ಸರ್ಕಾರ ಇದನ್ನು ಮನಗಂಡು ಕನ್ನಡ ನಾಡಿನಲ್ಲಿ ಇಂತಾದ್ದು ಆಗಬಾರದು ಎಂದು ಈ ಕಾನೂನನ್ನು ತಂದಿದೆ. ಅವಿರೋಧವಾಗಿ ಇದು ಪಾಸ್ ಆಗಿದೆ. ಪಾಸ್ ಆಗಿ ಎಷ್ಟೋ ಸಮಯ ಕೂಡ ಕಳೆದಿದೆ. ಈಗ ಈ ರೀತಿಯಲ್ಲಿ ನಮ್ಮ ಮಿತ್ರರು ಧರಣಿ ಮಾಡುವುದು ಸರಿಯಿಲ್ಲ. ಇದು ಅಷ್ಟಾಗಿ ಸರಿಯಾದುದು ಅಲ್ಲ. ಆದದ್ದು ಆಗಿ ಹೋಗಿದೆ. ಇದು ಬೆನ್ನಿಗೆ ಹೊಡೆದು ಹಲ್ಲನ್ನು ಉದುರಿಸುವ ಪ್ಲಾನ್ ಸರಿಯಲ್ಲ. ಆದ್ದರಿಂದ ಇವರು ದಯಮಾಡಿ ಧರಣಿಯನ್ನು ವಾಪಸ್ ತೆಗೆದುಕೊಂಡು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳಿದರು, ನಾನು ಗಡಿ ಪ್ರದೇಶದಿಂದ ಬಂದಿದ್ದೇನೆ ಎಂದು. ನಾನು ಕೂಡ ಗಡಿ ಪ್ರದೇಶದಿಂದ ಬಂದಿದ್ದೇನೆ. ಅದರ ಬಗ್ಗೆ ನನಗೂ ಅಭಿಮಾನ ಇದೆ. ನಮ್ಮಲ್ಲಿ ಎಂಇಎಸ್‌ನವರ ಸಂಖ್ಯೆ ಜಾಸ್ತಿ ಇದೆ. ಇದರ ಉದ್ದೇಶ ಇಷ್ಟೇ. ಕರ್ನಾಟಕದಲ್ಲಿ ಕನ್ನಡ, ಮಹಾರಾಷ್ಟ್ರದಲ್ಲಿ ಮರಾಠಿ, ಆಂಧ್ರದಲ್ಲಿ ತೆಲುಗು, ಹೀಗೆ ಎಲ್ಲಾ ಕಡೆ ಅವರವರ ಭಾಷೆಯಲ್ಲಿ ವ್ಯವಹಾರ ನಡೆಯುತ್ತಿದೆ ಅಂದ ಹಾಗೆ ಸಭೆ ಸರ್ವಾನುಮತದಿಂದ ಪಾಸ್ ಮಾಡಿದಾಗ ಇವರು ಇರಲಿಲ್ಲವೆಂಬ ಕಾರಣದಿಂದ ಸಭೆಯಲ್ಲಿ ಒಂದು ಒತ್ತಾಯ ತರಲು ಇವರಿಗೆ ಯಾವ ನೈತಿಕ ಹಕ್ಕೂ ಇಲ್ಲ. ಅವರು ಮಸೂದೆ ತಿದ್ದುಪಡಿ ಬಂದಾಗ ಸದನದಲ್ಲಿ ಹಾಜರಿರಬೇಕಾಗಿತ್ತು, ಇಲ್ಲ ಅಂದರೆ ಯಾರು ಏನು ಮಾಡುವುದಕ್ಕಾಗುತ್ತದೆ? ಸದನದಲ್ಲಿ ಹಾಜರಿದ್ದು ತಿದ್ದುಪಡಿ ಚರ್ಚೆಯಲ್ಲಿ ಭಾಗವಹಿಸುವುದು ಅವರ ಕರ್ತವ್ಯವಾಗಿತ್ತು. ಈಗ ಅವರು ಈ ರೀತಿಯಲ್ಲಿ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಅಡ್ಡಿಪಡಿಸುವ ರೀತಿಯಲ್ಲಿ ಧರಣಿ ಕುಳಿತಿರುವುದು ಸರಿಯಾದುದಲ್ಲ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ರಂಗನಾಥ್ ರವರು ಹೇಳಿದ ಹಾಗೆ ನಿಯಮಾನುಸಾರವಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಸರಿಯಾಗಿದೆ. ಇಲ್ಲವಾದರೆ ಹೀಗೆ ಮಾಡಲು ಪ್ರೋತ್ಸಾಹಿಸಿದಂತಾಗಿ ನಿಯಮಗಳ ವಿರುದ್ಧವಾಗಿ ಎಲ್ಲರೂ ಬಂದು ಧರಣಿ ಕುಳಿತುಕೊಳ್ಳುವ ಹಾಗೆ ಆಗುತ್ತದೆ. ಯಾರೋ ಒಬ್ಬರಿಗೆ ಒಂದು ಬಿಲ್ ಪಾಸ್ ಆದುದು ಸರಿ ಎಂದು ಕಂಡು ಬಂದಿಲ್ಲ ಅಂದರೆ ಅವರು ಕೂಡ ಧರಣಿ ಕುಳಿತುಕೊಳ್ಳುವಂತಾಗುತ್ತದೆ. ಅದು ಸರಿಯಲ್ಲ. ಇದು ಮಾನ್ಯ ಎಂ.ಇ.ಎಸ್. ಸದಸ್ಯರುಗಳು ಸದನಕ್ಕೆ ಒಂದು ರೀತಿಯಲ್ಲಿ ತೋರಿದ ಅಗೌರವವಾದ ಕಾರಣ ಅವರ ಮೇಲೆ ಸೂಕ್ತ ರೀತ್ಯಾ ಕ್ರಮ ಜರುಗಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ ವೀರಪ್ಪ ಮೊಯಿಲಿ (ವಿದ್ಯಾ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸನ್ಮಾನ್ಯ ಸದಸ್ಯರು ಮೊನ್ನೆಯ ದಿವಸ ಈ ಸದನದಲ್ಲಿ ಅನುಮೋದನೆ ಸಿಕ್ಕಿದಂಥ ಮಸೂದೆ ಬಗ್ಗೆ ಇವೊತ್ತು ಆಕ್ಷೇಪಣೆ ಮಾಡಿ ಧರಣಿ ಕುಳಿತುಕೊಂಡಿದ್ದಾರೆ. ಇದು ಬಹುಶಃ ಕರ್ನಾಟಕ ರಾಜ್ಯದ ವಿಧಾನಸಭೆಯ ಇತಿಹಾಸದಲ್ಲಿಯೇ ಇದೊಂದು ಅಭೂತಪೂರ್ವವಾದಂಥ ಘಟನೆ ಇದು ಎಂದು ಹೇಳಬೇಕಾಗುತ್ತದೆ. ಅವರು ಈ ರೀತಿಯಲ್ಲಿ ಧರಣಿ

ಹೂಡಿರತಕ್ಕಂಥದ್ದು ಸರಿಯಾದುದಲ್ಲ. ಏಕೆಂದರೆ ಯಾವುದೇ ಮಸೂದೆಗಳು ಯಾವ ತರಹದಲ್ಲಿ ಇಲ್ಲಿ ಮಂಜೂರು ಆಗಬೇಕೆನ್ನುವುದರ ಬಗ್ಗೆ ನಿರ್ದಿಷ್ಟವಾದ ನಿಯಮಗಳು ಇವೆ, ಅವುಗಳ ಅನುಸಾರವಾಗಿಯೇ ಪಾಸ್ ಆಗಬೇಕಾಗುತ್ತದೆ. ಮತ್ತು ಅದೇ ರೀತಿಯಲ್ಲಿ ಈ ಮಸೂದೆಯೂ ಕೂಡ ಮಂಜೂರಾತಿಯನ್ನು ಪಡೆದಿದೆ. ಇಂಥವುಗಳ ಪರಿಶೀಲನೆಗೆ ತಮಗೆಲ್ಲರಿಗೂ ಸಾಕಷ್ಟು ಅವಕಾಶಗಳು ಇರುತ್ತವೆ. ಮೊದಲು ಅಜೆಂಡಾದಲ್ಲಿ ಬರುತ್ತವೆ, ಸದಸ್ಯರ ಗಮನಕ್ಕೆ ಈ ವಿಚಾರ ಬರುತ್ತದೆ. ಹೀಗೆಲ್ಲಾ ಇದ್ದು ಕೂಡ ನಮ್ಮ ಗಮನಕ್ಕೆ ಬಂದಿಲ್ಲ, ನಮ್ಮ ಗಮನಕ್ಕೆ ಬಾರದೆ ಮಸೂದೆಯು ಮಂಜೂರು ಆಯಿತು ಅಂದರೆ ಪ್ರಜಾಪ್ರಭುತ್ವ ಪದ್ಧತಿಗೆ ಒಂದು ರೀತಿಯಲ್ಲಿ ಅಪಚಾರ ಮಾಡಿದಂತೆ ಎಂದು ಹೇಳಬೇಕಾಗುತ್ತದೆ. ತಾವುಗಳು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರಾಗಿರಬಹುದು, ಆದರೆ ಸದಸ್ಯರಾಗುವ ಮೊದಲು ತಾವುಗಳು ಇಲ್ಲಿ ಒಂದು ವಚನ, ಒಂದು ಶಪಥವನ್ನು ತೆಗೆದುಕೊಂಡಿದ್ದೀರಿ. ಅದು ಏನು ಹೇಳುತ್ತದೆ ಎಂಬುದನ್ನು ದಯಮಾಡಿ ತಾವುಗಳು ಓದಿ ನೋಡಬೇಕು. ಇವೊತ್ತು ತಾವುಗಳು ಮಾಡುತ್ತಿರುವುದು ಸಾಮಾನ್ಯವಾದಂಥ ಧರಣಿ ಅಲ್ಲ, ಯಾವುದಾದರೂ ಒಂದು ಕ್ರಮ ಹೆಚ್ಚು ಕಡಿಮೆಯಾದರೆ ಇದೆಲ್ಲಾ ಮಾಡಬಹುದು, ಆದರೆ ಇವೊತ್ತು ಕ್ರಮಾನುಸಾರವಾಗಿ ಮಸೂದೆ ಮಂಜೂರು ಆದ ಮೇಲೆ ಅದು ನಮಗೆ ಗೊತ್ತಿಲ್ಲದೆ ಆಯಿತು. ನಮ್ಮ ಬೆನ್ನ ಹಿಂದೆ ಆಯಿತು ಎಂದು ನೀವ ಹೇಳುವುದು ಇದು ಪ್ರಜಾಪ್ರಭುತ್ವಕ್ಕೆ ಮತ್ತು ನಮ್ಮ ಸಂಪ್ರದಾಯಕ್ಕೆ ವಿರುದ್ಧವಾದಂಥ ಒಂದು ಪ್ರವೃತ್ತಿಯಾಗುತ್ತದೆ. ಇದು ನಮ್ಮೆಲ್ಲರ ಮೇಲೇ ರಿಫ್ಲೆಕ್ಟ್ ಆಗುತ್ತವೆ. ನಾವು ನಮ್ಮ ವಿಧಾನ ಸಬೆ ಬಗ್ಗೆ ಉಚ್ಚವಾದ ಪರಂಪರೆಯನ್ನು ಏನು ಕಟ್ಟಿಕೊಂಡು ಬಂದಿದ್ದೇವೆ, ಅದರಲ್ಲಿ ತಾವುಗಳು ಕೂಡಾ ಪಾಲುದಾರರು. ಎಲ್ಲಾ ಮಾನ್ಯ ಸದಸ್ಯರುಗಳು ಕೂಡ ಪಾಲುದಾರರು. ಆ ನಿಯಮಗಳನ್ನು ನಾವುಗಳೇ ಮಾಡಿರುವುದು. ಅದು ಮಂಜೂರು ಆದಮೇಲೆ ಅದನ್ನು ರೀ-ಓಪನ್ ಮಾಡಬೇಕೆಂದು ಇದ್ದರೆ ದಯಮಾಡಿ ತಾವುಗಳು ಯಾರಾದರೂ ಕಾನೂನು ಪಂಡಿತರ ಸಹಾಯವನ್ನು ಪಡೆಯಬಹುದು. ಕಾನೂನು ಪಂಡಿತರು ನಮ್ಮ ರಾಜ್ಯದಲ್ಲಿದ್ದಾರೆ, ಬಾಂಬೆಯಲ್ಲಿ ಇದ್ದಾರೆ. ಎಲ್ಲಾ ಕಡೆಗಳಲ್ಲಿಯೂ ಇದ್ದಾರೆ. ತಾವುಗಳು ಯಾರನ್ನು ಕಂಡು ಸಲಹೆ ಪಡೆಯಬೇಕೆಂದು ಇಚ್ಛಿಸುತ್ತೀರೋ ಅವರಿಂದ ಪಡೆಯಬಹುದು. ತಾವುಗಳು ಹಾಗೆ ಒಂದು ಸಮಾಲೋಚನೆ ಮಾಡಿ ಇದು ರೀಓಪನ್ ಮಾಡಲು ಆಗುತ್ತದೋ ಇಲ್ಲವಾ ಎಂದು ತಿಳಿದುಕೊಂಡು ಬಂದು ಇಲ್ಲಿ ಮಾನ್ಯ ಅಧ್ಯಕ್ಷರ ಮನ ಒಲಿಸಿ, ನಿಮ್ಮ ವಿಚಾರವನ್ನು ಮಂಡಿಸಿ, ಅದಕ್ಕೆ ಯಾರೂ ಕೂಡ ಬೇಡ ಎಂದು ಹೇಳುವುದಿಲ್ಲ. ಆಮೇಲೆ ಅದಕ್ಕೆ ಅಮೆಂಡ್‌ಮೆಂಟನ್ನು ಕೂಡ ತರಬಹುದಾದ ಸಂದರ್ಭಗಳು ಇವೆ. ಆದರೆ ಈಗ ಆಗುವುದಿಲ್ಲ. ಇಲ್ಲಿ ಮಂಜೂರಾದ ಮಸೂದೆಯು ವಿಧಾನ ಪರಿಷತ್ತಿಗೆ ಹೋಗುತ್ತದೆ. ಅಲ್ಲಿ ಯಾರಾದರೂ ತಿದ್ದುಪಡಿ ಅಲ್ಲಿ ಸೂಚಿಸಿ ಅದು ಅಲ್ಲಿ ಮಂಜೂರು ಆದರೆ ಪುನಃ ಇಲ್ಲಿಗೆ ಬರುತ್ತದೆ. ಆಗ ತಮ್ಮ ವಾದವನ್ನು ಮಂಡಿಸಲು ತಮಗೆ ಇಲ್ಲಿ ಅವಕಾಶ ಸಿಗುತ್ತದೆ. ಆದರೆ ಈ ಸಂದರ್ಭದಲ್ಲಿ ಇಲ್ಲಿ ಮಾತ್ರ ಅದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ಸದನದ ಮೇಲೆ ಒತ್ತಾಯ ತರಬೇಕಾದರೆ ಅದಕ್ಕೆ ಒಂದು ಕಾರಣ ಬೇಕಾಗುತ್ತದೆ. ಅದು ನ್ಯಾಯವಾಗಿ ಇರಬೇಕಾಗುತ್ತದೆ. ಅದಕ್ಕೆ ಪರಿಹಾರ ಮಾಡಲಿಕ್ಕೆ ಉಪಾಯ ಇರಬೇಕಾಗುತ್ತದೆ. ಆದರೆ ಇಲ್ಲಿ ತಮ್ಮ ವಾದದಲ್ಲಿ ಯಾವ ಉಪಾಯವಿದೆ ಎಂದು ಹೇಳಿ? ತಾವು ತಮ್ಮ ಸ್ಥಾನಗಳಿಗೆ ಹೋಗಿ ಉಪಾಯ ಹೇಳಿ. ಏನಾದರೂ ಸಾಧ್ಯವಿದ್ದರೆ ಮಾಡಬಹುದು. ಆದರೆ ಸಾಧ್ಯ ಇಲ್ಲದಿರತಕ್ಕ ಒತ್ತಾಯವನ್ನು ಸದನದ ಮೇಲೆ ತಂದರೆ ಅದರ ಅರ್ಥ ಏನು? ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ರಂಗನಾಥ್‌ರವರು ಹೇಳಿದಂತೆ ಅದು ಸದನದ ಯಾವುದೇ ಒಂದು ಪರಿಧಿಗೆ ಬರುವುದಿಲ್ಲ. ಒಂದು ರೀತಿಯಲ್ಲಿ ಎಂಎಎಸ್ ಸದಸ್ಯರು ಈ ಸದನವನ್ನು ಬ್ಲಾಕ್ ಮೇಲ್ ಮಾಡಿದಂತೆ ಆಗುತ್ತದೆ.

ನಿಮ್ಮ ಬೇಡಿಕೆಯು ನ್ಯಾಯಯುತವಾದುದು ಎಂದು ನಿಮ್ಮ ಮನಸ್ಸಿನಲ್ಲಿರಬಹುದು. ಅದು ನ್ಯಾಯಯುತವಾಗಿದ್ದರೆ, ಆ ಮಾರ್ಗದಲ್ಲಿ ಪರಿಹಾರವನ್ನು ಹುಡುಕಬಹುದು. ವಿಧಾನ ಪರಿಷತ್ತಿನಲ್ಲಿ ಬೇಕಾದರೆ ತಿದ್ದುಪಡಿಗೆ ಒತ್ತಾಯ ತರಬಹುದು. ಅಲ್ಲಿ ಚರ್ಚೆಯಾಗಿ ಇಲ್ಲಿಗೆ ಬಂದರೆ ಇಲ್ಲಿ ಪುನಃ ತಾವು ಆ ಒಂದು ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ಆಮೇಲೆ ಬೇಕಾದರೆ ತಾವು ಇಲ್ಲಿ ತಮ್ಮ ವಾದ ಮಂಡನೆ ಮಾಡಲು ಅವಕಾಶ ಇರುತ್ತದೆ. ಇಲ್ಲಿ ಮಸೂದೆ ಮಂಡನೆಯಾದ ಮೇಲೆ ಅದಕ್ಕೆ ರಾಜ್ಯಪಾಲರ ಒಪ್ಪಿಗೆ ಸಿಕ್ಕಿದ ಮೇಲೆ ಸಹ ಪುನಃ ಅಮೆಂಡ್‌ಮೆಂಟ್ ತರಲು ಪ್ರೈವೇಟ್ ಮೆಂಬರ್ಸ್ ರೆಸಲ್ಯೂಷನ್ ತರಲಿಕ್ಕೆ ತಮಗೆ ಅವಕಾಶವಿರುತ್ತದೆ. ಈ ಯಾವ ಅವಕಾಶಗಳನ್ನು ಉಪಯೋಗ ಮಾಡದೆ ಕನ್ನಡದಲ್ಲಿ ಒಂದು ಗಾದೆ ಇದೆ, ನಾನು ಹಿಡಿದದ್ದೇ ದಾರಿ ಎನ್ನುವ ಮಟ್ಟಕ್ಕೆ ಹೋದರೆ ಕರ್ನಾಟಕ ರಾಜ್ಯದ ಜನ ತಮ್ಮ ಬೆಂಬಲಕ್ಕೆ ಒಪ್ಪಿಗೆ ಕೊಡುವುದಿಲ್ಲ. It will rather reflect on you. ಜನರು ಏನು ತಿಳಿದುಕೊಳ್ಳುತ್ತಾರೆ, ತಾವು ಜಾಗೃತರಾಗಿರಲಿಲ್ಲ. Every Member has to be vigilant as to what is going on in this House. You are all paid honorariums. ಅದು ನಿಮ್ಮ ಜನರ ತೆರಿಗೆಯಿಂದ ಬರುವಂಥದ್ದು. You have got to legitimately discharge your duties. ಇವತ್ತು ಧರಣಿ ಕೂತರೆ ಏನು ಅರ್ಥವಾಗುತ್ತದೆ? ಮೊನ್ನೆ ನೀವು ಜಾಗೃತರಾಗಿರಲಿಲ್ಲ, ನಿಮ್ಮ ಜವಾಬ್ದಾರಿಯನ್ನು ಶಾಸಕರಾಗಿ ಸರಿಯಾಗಿ ನಿರ್ವಹಿಸಲಿಲ್ಲವೆಂಬ ಅಪಾದನೆ ನಿಮ್ಮ ಮೇಲೇ ಬರುತ್ತದೆಯೇ ಹೊರತು ನಮ್ಮ ಮೇಲೆ ಬರುವುದಿಲ್ಲ. Are you prepared to take that blame?

(ಗೊಂದಲ)

Sri B.I. Patil : It was just to introduce and not for consideration and passing. Just we went out at that time.

ಶ್ರೀ ಎಂ. ವೀರಪ್ಪ ಮೊಯಿಲಿ : ಏಕೆ ಹೋದಿರಿ?

Mr. Speaker : I want the Hon.Minister to address me.

Sri M.Veerappa Moily : Yes Sir, I have been addressing you through this House. ನಾನು ಈಗ ಹೇಳುವುದು ಇಷ್ಟೆ, ಈಗ ಬಹುಶಃ ಹೊಸ ಒಂದು ವಿಚಾರಕ್ಕೆ ಬರಬೇಕಾಗುತ್ತದೆ. ಯಾರಾದರೂ ಸದಸ್ಯರು ತಮ್ಮ ಮತದಾರರ ಕ್ಷೇತ್ರದ ಬೇಡಿಕೆಗಳಿಗೆ ಸ್ಪಂದಿಸದೆ ಇದ್ದರೆ ಏನಾಗಬೇಕು? ಮತದಾರರ ಆಸೆ ಮತ್ತು ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಅದಕ್ಕೆ ಯಾರು ಜವಾಬ್ದಾರರು? ಈ ಸದನ ಜವಾಬ್ದಾರವಲ್ಲ, ಅಧ್ಯಕ್ಷರೂ ಜವಾಬ್ದಾರರಲ್ಲ, ಅದಕ್ಕೆ ಸದಸ್ಯರೇ ಜವಾಬ್ದಾರರಾಗುತ್ತಾರೆ. ಆಗ they have to be punished you want this House to be punished for that? ಈಗ ತಾವು ಮಾಡಿದ ಕೆಲಸದಿಂದ ಏನಾಗುತ್ತದೆ ಎಂದರೆ ಆ ರೀತಿ ಮಾಡಲು ಬರುವುದಿಲ್ಲ. You are insulting the entire House by sitting in the House. well of ಇದು ಸರಿಯಲ್ಲ. ಆದ್ದರಿಂದ ದಯವಿಟ್ಟು ತಾವು ಎದ್ದು ತಮ್ಮ ಸ್ಥಾನಗಳಿಗೆ ಹೋಗಿ. ಅದಕ್ಕೆ ಬೇಕಾದ ನ್ಯಾಯವಾದ ಮಾರ್ಗಗಳನ್ನು ಹುಡುಕಿ ನಿಮ್ಮ ಬೇಡಿಕೆಗಳನ್ನು ಅಕ್ರಮವಾಗಿ ಅನ್ಯಾಯವಾಗಿ ಹರಿದಾರ ಮಾಡಬೇಕೆಂದು ಈ ಕರ್ನಾಟಕದ ಜನ ಬಯಸುವುದಿಲ್ಲ. ತಾವು ಅನ್ಯಾಯ ಮಾರ್ಗದಿಂದ ಜಯಗಳಿಸಬೇಕೆಂದು ತಾವು ಹೋದರೆ ಅಂಥವರ್‍ಯಾರಿಗೂ ಜಯ ಸಿಗುವುದಿಲ್ಲ. ಆದ್ದರಿಂದ ನ್ಯಾಯದ ಮಾರ್ಗ ಹುಡುಕಿ, ಜಯದ ಮಾರ್ಗ ಹುಡುಕಿ ಅದರೆ ಇಡೀ ಸದನದ ಉಜ್ವಲ ಪರಂಪರೆ ಏನಿದೆ, ಅವಕ್ಕೆ ಮಾತು ಮಸಿ ಬಳಿಯುವ ಕೆಲಸ ಮಾಡಲು ತಮಗೂ ಅಧಿಕಾರವಿಲ್ಲ, ನಮಗೂ ಇಲ್ಲ ಯಾರಿಗೂ ಇಲ್ಲ. ಆದ್ದರಿಂದ ತಾವು ತಮ್ಮ ಸ್ಥಾನಕ್ಕೆ ಹೋಗಿ

ಅದಕ್ಕೆ ಬೇಕಾದ ಪರಿಹಾರ ಮಾರ್ಗ ಹುಡುಕಲಿಕ್ಕೆ ನಾವು ಯಾರು ನಿಮಗೆ ಅಡ್ಡಿ ಬರುವುದಿಲ್ಲ.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಸಿ. ಬೈರೇಗೌಡ: ಅಧ್ಯಕ್ಷರೇ, ಇವರ ಬಗ್ಗೆ ಏನು ಮಾಡುತ್ತೀರಿ,

(ಗೊಂದಲ)

ಶ್ರೀ ಕೆ. ಹೆಚ್. ರಂಗನಾಥ್: ಇದು ಒಂದು ವಿಶೇಷವಾದ ಪರಿಸ್ಥಿತಿ. ಇದು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವಂಥದು. ತಮಗೆ ಈ ಸದನ ಕೊಟ್ಟಿರುವ ಅಧಿಕಾರವನ್ನು ತಾವು ಚಲಾಯಿಸಬೇಕಾಗುತ್ತದೆ. ಈ ರೀತಿ ಅವರು ಅಲ್ಲಿ ಕೂತಿರುವಾಗ ಸದನದ ಕಾರ್ಯಕಲಾಪ ನಡೆಸಲು ಅವಕಾಶ ಕೊಡುವುದು ಸರಿಯಲ್ಲ. ಏಕೆಂದರೆ ಒಂದು ಕಾನೂನನ್ನು ಈ ಸಭೆ ಪಾಸ್ ಮಾಡಿದ ಮೇಲೆ ಅದು ಸರಿಯೊ ತಪ್ಪೊ ಎಂಬುದನ್ನು ಪ್ರಶ್ನೆ ಮಾಡಲು ಅವರಿಗೆ ಅವಕಾಶ ಇದೆ ಹಾಗಿರುವಾಗ, ಇಲ್ಲಿ ಕೂರಲು ಅವಕಾಶವೇ ಇರಲಿಲ್ಲ. ಸದಸ್ಯರು ತಮ್ಮ ಜಾಗ ಬಿಟ್ಟು ಬರಲು, ಏನೋ ಒಂದು ಪ್ರತೀತಿ ನಡೆದುಕೊಂಡು ಬಂದು ಇವತ್ತು ದೊಡ್ಡ ಸಂಪ್ರದಾಯವಾಗಿ ಹೋಗಿದೆ. ಆದರೆ ಇಂತಹ ಪರಿಸ್ಥಿತಿಗೆ ಅವಕಾಶ ಮಾಡಿ ಕೊಟ್ಟರೆ ನಾವು ದೊಡ್ಡ ತಪ್ಪು ಮಾಡಿದಂತಾಗುತ್ತದೆಂದು ನನ್ನ ಅಭಿಪ್ರಾಯ. ಆದ್ದರಿಂದ ಸದಸ್ಯರು ತಮ್ಮ ಸ್ಥಾನಗಳಿಗೆ ಹೋಗದಿದ್ದರೆ ಮಾನ್ಯ ಪಾರ್ಲಿಮೆಂಟರಿ ಅಫೈರ್ ಸಚಿವರು ನಿರ್ಣಯವನ್ನು ಸಭೆಯ ಮುಂದಿಟ್ಟು ಅದನ್ನು ವೋಟಿಗೆ ಹಾಕಿ ನಂತರ ಅವರನ್ನು ಹೊರಹಾಕಿ ಅನಂತರ ಸಭೆ ನಡೆಸಬೇಕಾಗುತ್ತದೆ. ಇಲ್ಲದಿದ್ದರೆ ನಾವು ತಪ್ಪು ಮಾಡಿದಂತಾಗುತ್ತದೆಂದು ನನ್ನ ಅಭಿಪ್ರಾಯವನ್ನು ತಮ್ಮ ಮುಂದಿಡುತ್ತಿದ್ದೇನೆ.

ಶ್ರೀ ಬಾಬಾಗೌಡ ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಒಂದು ರಾಜಕೀಯ ಕುತಂತ್ರ ನಡೆದಿದೆ. ಅದನ್ನು ತಾವು ಪರೀಕ್ಷೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಧರಣಿಯಲ್ಲಿ ಕುಳಿತಿರುವ ನಾಲ್ಕು ಜನ ಮಾನ್ಯ ಶಾಸಕರಲ್ಲಿ ಒಬ್ಬರು ಮಾತ್ರ ಪೇಟವನ್ನು ಸುತ್ತಿಲ್ಲ. ತಾವು ಅವರಿಂದ ಉತ್ತರವನ್ನು ಕೇಳಬೇಕು. ಅವರು ಎಂ.ಇ.ಎಸ್. ಶಾಸಕರೋ ಹೌದೋ ಅಲ್ಲವೋ ಎಂದು, ಇದು ಮೊದಲು ತೀರ್ಮಾನವಾಗಬೇಕು. ಈಗ ಪೇಟ ಸುತ್ತಿಲ್ಲದೇ ಇರತಕ್ಕಂಥವರು ಅವರು ಎಂ.ಇ.ಎಸ್.ಗೆ ಸೇರಿದ್ದಾರೋ ಹೇಗೆ? ಅದನ್ನು ತಿಳಿಸಿ ಕೊಟ್ಟರೆ ಬಹಳ ಒಳ್ಳೆಯದು. ಇಲ್ಲದಿದ್ದರೆ ಈ ಸಭೆಯನ್ನು ರಾಜಕೀಯ ದುರುದ್ದೇಶಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಹೇಳಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇದರಲ್ಲಿ ಏನೋ ಒಂದು ರಾಜಕೀಯ ಇದೆ. ಏಕೆಂದರೆ ನಾಲ್ಕು ಜನರಲ್ಲಿ ಒಬ್ಬರು ಪೇಟ ಸುತ್ತಲಿಲ್ಲ ಎಂದು ಹೇಳಿದರೆ ಹೇಗೆ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರಲ್ಲಿ ಮಾನ್ಯ ಶ್ರೀ ಬಾಬಾಗೌಡ ಪಾಟೀಲರು ಹೇಳುವಂಥ ವಿಚಾರದ ಹಿಂದೆ ಬಹಳ ಗಂಭೀರವಾದ ವಿಚಾರ ಇದೆ. ಏಕೆಂದರೆ ಇಲ್ಲಿ ಧರಣಿ ಕುಳಿತಿರುವ ಸದಸ್ಯರಲ್ಲಿ ಒಬ್ಬರು ಬೇರೆ ಬೇರೆ ವೇದಿಕೆಯಲ್ಲಿ ಬೇರೆ ಬೇರೆ ಹೇಳಿಕೆಗಳನ್ನು ಪ್ರಮಾಣ ಪತ್ರಗಳ ಮೂಲಕ ಕೊಟ್ಟಿದ್ದಾರೆ. ಇಲ್ಲಿ ಪ್ರಮಾಣವನ್ನು ಮಾಡುವಾಗಲೇ ಒಂದು ಪ್ರಮಾಣ, ಬೇರೆ ವೇದಿಕೆಯಲ್ಲಿ ಪ್ರಮಾಣ ಪತ್ರಿಕೆಯನ್ನು ಕೊಡುವಾಗ ಬೇರೆ ವಿಚಾರವನ್ನು ನಮೂದಿಸಿದ್ದಾರೆ. ಇದು ಬಹಳ ಮುಖ್ಯವಾದ ವಿಚಾರವಾದುದರಿಂದ ಮಾನ್ಯ ಬಾಬಾಗೌಡ ಪಾಟೀಲರು ಎತ್ತಿರುವಂಥ ವಿಚಾರವನ್ನು ತಾವು ಬಗೆಹರಿಸಬೇಕು.

Mr: Speaker : May I request the Hon'ble Members to go back to their seats?

ಶ್ರೀ ಬಸವರಾಜ ರಾಯರೆಡ್ಡಿ : ತಾವು ಅದನ್ನು ಕನ್ನಡದಲ್ಲಿಯೇ ಹೇಳಿದರೆ ಒಳ್ಳೆಯದು. ಅವರಿಗೆ ಕನ್ನಡ ಬರುತ್ತದೆ. ನಮ್ಮ ಜೊತೆಯಲ್ಲಿ ಅವರು ಕನ್ನಡದಲ್ಲಿಯೇ ಮಾತನಾಡುತ್ತಾರೆ. ಇಲ್ಲಿ ಮಾತ್ರ ನಾಟಕ ಮಾಡುತ್ತಾರೆ ಅಷ್ಟೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ತಮ್ಮ ತಮ್ಮ ಸ್ಥಾನಗಳಿಗೆ ಮಾನ್ಯ ಸದಸ್ಯರುಗಳು ಹೋಗಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಹಾಗೂ ಮಾನ್ಯ ಕೆ.ಎಸ್. ಈಶ್ವರಪ್ಪನವರು ಪ್ರತಿಭಟಿಸಿ ಸದಸ್ಯರಿಗೆ ಧಿಕ್ಕಾರ ಎಂದು ಕೂಗುತ್ತಾ ಸದನದ ಬಾವಿಯಲ್ಲಿ ಬಂದು ಧರಣಿ ಕುಳಿತರು)

ಅಧ್ಯಕ್ಷರು : ಮಾನ್ಯ ಸದಸ್ಯರಾದಂಥ ರಂಗನಾಥ್‌ರವರು ಹೇಳಿದ ಅಭಿಪ್ರಾಯಗಳನ್ನು ಪರ್ಯಾಲೋಚನೆ ಮಾಡುತ್ತಿರುವಂಥ ಸಂದರ್ಭದಲ್ಲಿ ಇನ್ನಿಬ್ಬರು ಮಾನ್ಯ ಸದಸ್ಯರುಗಳು ಬಾವಿಯೊಳಗೆ ಹೇಗಿ ವಿಚಾರಗಳನ್ನು ಮತ್ತಷ್ಟು ಜಟಿಲಗೊಳಿಸಿದ್ದಾರೆ. ಆದುದರಿಂದ ಮಾನ್ಯ ರಂಗನಾಥ್ ರವರ ಸಲಹೆಯನ್ನು ಪರ್ಯಾಲೋಚನೆ ಮಾಡಿ ಅದಕ್ಕೆ ಸಂಬಂಧಪಟ್ಟ ಹಾಗೆ ನಿಯಮ 331ನ್ನು ಓದುತ್ತಿದ್ದೆ. ಅಷ್ಟರಲ್ಲಿ ಇವರುಗಳು ಮತ್ತೆ ಅಲ್ಲಿ ಧಾವಿಸಿದ್ದಾರೆ (ಬಾವಿಯೊಳಗೆ)

ಶ್ರೀ ಕೆ.ಹೆಚ್ ರಂಗನಾಥ್ : ಅವರನ್ನು ತಾವು ಕರೆಯಬೇಕು ಸ್ವಾಮಿ, ಇವರನ್ನು ಸಹ ಕರೆಯಬೇಕು.

ಅಧ್ಯಕ್ಷರು : ಆದುದರಿಂದ ನಾನು ಏನು ಯೋಚನೆ ಮಾಡುತ್ತಿದ್ದೆ ಎಂದರೆ ಈಗಾಗಲೇ ಒಂದು ರೂಲಿಂಗನ್ನು ಲೋಕಸಭೆಯಲ್ಲಿ ಇದರ ಬಗ್ಗೆ ಕೊಟ್ಟಾಗಿದೆ. ನಾವು ಕೂಡಾ ಕೊಟ್ಟಿದ್ದೇವೆ. ಧರಣಿಯನ್ನು ಮಾಡುತ್ತಿರುವಂಥ ಸಂದರ್ಭ ಸಭೆಯನ್ನು ವಿಕೃತಗೊಳಿಸುವುದಿಲ್ಲ, ಸಭೆಯು ತನ್ನ ಕಾರ್ಯಗಳನ್ನು ನಿರ್ವಹಣೆ ಮಾಡಬಹುದು ಎಂದು ಹೇಳಿ ರೂಲಿಂಗ್‌ನಲ್ಲಿ ಇದೆ.

ಶ್ರೀ ಕೆ.ಹೆಚ್. ರಂಗನಾಥ್ : ಅದನ್ನು ತಾವು ಪೂರ್ಣ ಮಾಡುವುದಕ್ಕಿಂತ ಮುಂಚೆ ಒಂದು ಮಾತು. ತಾವು ಹೇಳಿದ ಹಾಗೆ ಆ ರೀತಿ ಇದೆ. ಇವತ್ತು ಪರಿಸ್ಥಿತಿ ಏನು ಇದೆ ಎಂದರೆ ಒಂದು ಕಾನೂನು ಪಾಸಾಗಿದೆ. ನಾಳೆ ನಾವು ಮತ್ತೊಂದು ಮಾಡಬಹುದು. ವಿರೋಧ ಪಕ್ಷದವರು ಅಧಿಕಾರಕ್ಕೆ ಬಂದಾಗ ಅವರೊಂದು ಕಾನೂನನ್ನು ಮಾಡಬಹುದು. ನಾವು ಅಲ್ಲಿಗೆ ಹೋದಾಗ ಮತ್ತೊಂದು ಮಾಡಬಹುದು. ನಮಗೆ ಸರಿಯಿಲ್ಲ ಎಂದು ಹೇಳಿ ಧರಣಿಯಲ್ಲಿ ಕುಳಿತುಕೊಳ್ಳುವಂಥ ಪರಿಸ್ಥಿತಿ ಬಂದರೆ, ಅದು ಸರಿಹೋಗುವುದಿಲ್ಲ. ಆ ರೀತಿ ಆಗುವುದಾದರೆ ಕೋರ್ಟ್‌ಗಳನ್ನು ಏತಕ್ಕೆ ಇರಬೇಕು? ಇದು ಸರಿಯಾದುದಲ್ಲ. ಅವರು ಒಂದು ಪಕ್ಷಕ್ಕೆ ಸೇರಿದ್ದಾರೆ. ಆದ್ದರಿಂದ ಇದು ಸರಿಯಲ್ಲವೆಂದು ಕಂಡರೆ ಇಂತಹ ಮಾರ್ಗ ಅನುಸರಿಸುವುದು ಸರಿಯಲ್ಲ.

ಈಗ ಅವರು ತಮಗೆ ಬರೆದಿರುವ ಪತ್ರದಲ್ಲಿ ಇದು ಕಾನೂನಿನ ಚೌಕಟ್ಟಿನ ಒಳಗೆ ಬರುವುದಿಲ್ಲವೆಂದು ತಿಳಿಸಿರಬಹುದು ಆ ರೀತಿ ಏನಾದರೂ ಇದ್ದರೆ ಅವರು ಕೋರ್ಟಿಗೆ ಹೋಗಬಹುದು, ಪ್ರಶ್ನೆ ಮಾಡಬಹುದು, ಇಲ್ಲವೇ ಪಾರ್ಲಿಮೆಂಟಿನ ಅಪೇರ್ಸ್ ಮಿನಿಸ್ಟರ್ ಹೇಳಿದ ಹಾಗೆ ಇದು ವಿಧಾನ ಪರಿಷತ್ತಿನಲ್ಲಿ ಇನ್ನೂ ಪೂರ್ಣ ಪಾಸ್ ಆಗಿಲ್ಲ. ಆದ್ದರಿಂದ ಅಲ್ಲಿ ಏನು ಮಾಡಬಹುದೋ ಅದನ್ನು ಮಾಡಲು

ಅವರ ಸಹಾಯಕರು ಇದ್ದರೆ, ಅವರ ಮೂಲಕ ಅಲ್ಲಿ ಪ್ರಸ್ತಾಪ ಮಾಡಲಿಕ್ಕೆ ಅವರು ಪ್ರಯತ್ನ ಮಾಡಬಹುದು. ಅದು ಬಿಟ್ಟು ಕಾನೂನು ಇವತ್ತು ಸರಿಯಿಲ್ಲ ಅಂತ ಹೇಳಿ ಎಲ್ಲರೂ ಇಲ್ಲಿ ಧರಣಿ ಕುಳಿತುಕೊಳ್ಳುವುದಾದರೆ we are creating a very bad precedent. ಇದಕ್ಕೆ ಸಹಾಯವಾಗುವಂತೆ ಮಾನ್ಯ ವಾಟಾಳ್ ನಾಗರಾಜ್ ಮತ್ತು ಮಾನ್ಯ ಈಶ್ವರಪ್ಪನವರು ಬಂದು ಕುಳಿತುಬಿಟ್ಟರು. ನಾನು ಅವರನ್ನು ವಿನಂತಿಮಾಡಿಕೊಳ್ಳುತ್ತೇನೆ. ಬಹಳ ಮಟ್ಟಿಗೆ ಅವರು ಇದನ್ನು ಅರ್ಥಮಾಡಿಕೊಂಡರೋ ಇಲ್ಲವೋ ಗೊತ್ತಾಗಲಿಲ್ಲ. ಅವರು ಮೊದಲು ಹೋಗಿ ಅವರ ಸ್ಥಳಕ್ಕೆ ಹೋಗಿ ಕುಳಿತುಕೊಳ್ಳತಕ್ಕದ್ದು ಒಳ್ಳೆಯದು. ಆದಾದ ಮೇಲೆ ತಾವು ಇದನ್ನು ಪರಿಶೀಲಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಂಥಾದ್ದಕ್ಕೆ ತಾವು ಅವಕಾಶ ಕೊಟ್ಟರೆ we will be creating a bad precedent. Then the House will not be in a position to pass any law at all. ಕಾನೂನು ಎಲ್ಲರಿಗೂ ಒಪ್ಪಿಗೆ ಆಗುತ್ತದೆ ಅಂತ ಇಲ್ಲ. ಒಪ್ಪಿಗೆ ಆಗದಿದ್ದಾಗ ನಾವು ಇದನ್ನೇ ಮಾಡತಕ್ಕ ಪರಿಸ್ಥಿತಿಗೆ ಮಾನ್ಯ ಸದನದ ಸದಸ್ಯರು ಅದನ್ನು ಅಳವಡಿಸಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಹಾಗೂ ಈ ಸದನದ ಮೂಲಕ ನಾನು ಮಾನ್ಯ ವಾಟಾಳ್ ನಾಗರಾಜ್ ಅವರನ್ನು ಮತ್ತು ಮಾನ್ಯ ಈಶ್ವರಪ್ಪನವರನ್ನು ತಮ್ಮ ತಮ್ಮ ಸ್ಥಾನಗಳಿಗೆ ಬರಲಿಕ್ಕೆ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಸಮಯಒಂದು ಗಂಟೆಯಾಗಿದೆ. ಆದ್ದರಿಂದ ಈಗ ಸದನವು ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 2-00 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು 1-07 ಮುಕ್ತಾಯವಾಯಿತು)

(ಸದನವು ಪುನಃ 2.40ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಸದಸ್ಯರು ಧರಣಿ ಕುಳಿತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣಿಯವರೇ, ಇಲ್ಲಿ ವಿನಾಕಾರಣ ಇವರು ಧರಣಿ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಎಂ.ಇ.ಎಸ್.ನವರು ಬಹಳ ಉದ್ಧಟತನದಿಂದ ಈ ಸಭೆಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಅದು ಒಳ್ಳೆಯ ನೀತಿ ಅಲ್ಲ. ತಮ್ಮ ರಾಜಕೀಯದ ಒಂದು ಉಳುವಿಗೋಸ್ಕರವಾಗಿ ಇಲ್ಲಿ ಒಂದು ರೀತಿಯ ಪಿತೂರಿಯನ್ನು ಮಾಡುತ್ತಿದ್ದಾರೆ. ಈ ಪಿತೂರಿಗೆ ನಾವು ಬೆಂಬಲ ಕೊಡುವುದಕ್ಕೆ ಸಾಧ್ಯವಿಲ್ಲ. ಈ ಕೂಡಲೇ ಅವರು ಈ ಸಭೆಯಿಂದ ಹೊರಗಡೆ ಹೋಗಬೇಕು. ಇಲ್ಲದಿದ್ದರೆ ಈ ಸಭೆಯ ಘನತೆಯನ್ನು ಕಾಪಾಡುವುದಕ್ಕೆ ಅವರು ತಮ್ಮ ಸ್ಥಾನಗಳಿಗೆ ಎದ್ದು ಬರಬೇಕು. ಇಲ್ಲಿ ಸರ್ವಾನುಮತದಿಂದ ಪಾಸ್ ಆಗಿರತಕ್ಕ ಮಸೂದೆಯ ವಿರುದ್ಧ ಇಲ್ಲಿ ಧರಣಾ ಮಾಡತಕ್ಕದ್ದು ಸರಿಯಲ್ಲ. ಇದು ಸಂಪೂರ್ಣ ನಾಚಿಕೆಕೇಡು ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಎಂ.ಇ.ಎಸ್.ನವರ ಕ್ರಮ ಸರಿಯಿಲ್ಲ. ಇಡೀ ಬೆಳಗಾಂ ನಗರವನ್ನೇ ನಾಶಮಾಡಿ ಕನ್ನಡಿಗರಿಗೆ ದ್ರೋಹ ಮಾಡಿ ಕನ್ನಡದ ಭಾಷೆಗೆ ದ್ರೋಹ ಮಾಡಿ ಇಡೀ ಬೆಳಗಾಂನ್ನು ಮಹಾರಾಷ್ಟ್ರವಾಗಿ ಮಾಡಿಕೊಳ್ಳುವುದಕ್ಕೆ ಹೊರಟಿದ್ದಾರೆ. ಬೆಳಗಾಂನ ಮಹಾನಗರ ಪಾಲಿಕೆಯನ್ನು ಸಂಪೂರ್ಣವಾಗಿ ಎಂ.ಇ.ಎಸ್.ನವರ ಕಾರ್ಯಾಲಯ ಮಾಡಿಕೊಳ್ಳುವುದಕ್ಕೆ ಹೋಗಿದ್ದಾರೆ. ಅದರ ಮೇಲೆ ಮರಾಠಿ ಧ್ವಜವನ್ನು ಹಾಕಿ ಅನ್ಯಾಯವನ್ನು ಮಾಡುತ್ತಿದ್ದಾರೆ. ಇದು ಸರಿಯಾದ ನೀತಿ ಅಲ್ಲ.

(ಗೊಂದಲ)

ಉಪಾಧ್ಯಕ್ಷಿಣಿಯರು : ಮಾನ್ಯ ನಮ್ಮ ಎಂ.ಇ.ಎಸ್. ಸದಸ್ಯರು ದಯವಿಟ್ಟು ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕು. ತಮ್ಮದು ಏನೇ ಇದ್ದರೂ ತಾವು ತಮ್ಮ

ಪೀಠದಿಂದ ಮಾತನಾಡಿದರೆ ಬೆಲೆ ಬರುತ್ತದೆ. ಮತ್ತು ರೆಕಾರ್ಡಿಗೂ ಹೋಗುತ್ತದೆ. ದಯವಿಟ್ಟು ತಾವೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅತ್ಯಂತ ದೊಡ್ಡ ಅಪರಾಧ ಮಾಡಿದ್ದಾರೆ.

(ಗೊಂದಲ)

ಉಪಾಧ್ಯಕ್ಷಣೆಯವರು : ಮಾನ್ಯ ಶ್ರೀ ನಾಗರಾಜ್‌ರವರೇ, ಮುಖ್ಯ ಮಂತ್ರಿಗಳು ಈಗ ಏನೋ ಹೇಳುತ್ತಿದ್ದಾರೆ, ದಯವಿಟ್ಟು ಕುಳಿತುಕೊಳ್ಳಿ.

ಪ್ರೊ. ಎಂ. ನಂಜುಂಡಸ್ವಾಮಿ : ಮಾನ್ಯ ಉಪಾಧ್ಯಕ್ಷಣೆಯವರೇ, ನಾವು ಇಲ್ಲಿ ಸಭೆ ನಡೆಸುವುದರ ಬಗ್ಗೆ ಸ್ವಲ್ಪ ಮಾತನಾಡಬೇಕು. ನಮ್ಮ ಈ ಸದನದ ಸದಸ್ಯರ ನಡೆವಳಿಕೆಯ ಬಗ್ಗೆಯೂ ಸ್ವಲ್ಪ ಮಾತನಾಡಬೇಕು. ಇಲ್ಲಿ ಧರಣಿ ಕುಳಿತ್ತಿರುವಂತಹ ಸದಸ್ಯರು ಇವರು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರೋ ಅಥವಾ ಅಲ್ಲವೋ ಎನ್ನುವುದನ್ನು ಮೊದಲು ಹೇಳಬೇಕು. In what capacity they are conducting the Dharna? ಇದನ್ನು ಏಕೆ ಹೇಳುತ್ತಿದ್ದೇನೆ ಅಂದರೆ, ಹೊರಗಡೆ ಅವರು ನಾವು ಎಂ.ಇ.ಎಸ್. ಅಲ್ಲವೆಂದು ಪ್ರಮಾಣ ಮಾಡಿದ್ದಾರೆ. ಪ್ರಮಾಣ ಪತ್ರಿಕೆಗಳನ್ನು ಕೊಡುತ್ತಾರೆ. ಇಲ್ಲಿ ಒಳಗೆ ಬಂದು ನಾವು ಎಂ.ಇ.ಎಸ್. ಅನ್ನುತ್ತಾರೆ. ಮೊದಲು ಅದು ಕ್ಲಾರಿಫೈ ಆಗಬೇಕು. whether the Hon'ble Members of this House can conduct themselves that way? ಇದು ಮೊದಲು ಸ್ಪಷ್ಟವಾಗಬೇಕು. ಮಾನ್ಯ ಸಭಾಧ್ಯಕ್ಷರು ಆ ಒಂದು ಸೃಷ್ಟೀಕರಣವನ್ನು ತೆಗೆದುಕೊಂಡ ಮೇಲೆ ಮುಂದಿನ ಕ್ರಮ ತಾವು ತೆಗೆದುಕೊಳ್ಳಬಹುದು.

ಶ್ರೀ ಆರ್.ಎನ್. ನಾಯಕ್ : ಪ್ರೊಫೆಸರ್ ಅವರು ಹೇಳಿದ ಹಾಗೆ ಪ್ರಮಾಣ ಪತ್ರಿಕೆಯಲ್ಲಿ ಅವರು ಏನು ಹೇಳಿದ್ದಾರೆಂದರೆ ನಾವು ಮರಾಠಿ ಭಾಷೆಯ ಆಧಾರದ ಮೇಲೆ ನಾವು ಗೆದ್ದಿಲ್ಲ. ಮತ್ತು ನಾವು ಎಂ.ಇ.ಎಸ್.ನ ಕ್ಯಾಂಡಿಡೇಟ್ ಅಲ್ಲ ಇಂಡಿಪೆಂಡೆಂಟ್ ಅಂತ ಹೇಳಿದ್ದಾರೆ. ಅಫಿಡೇವಿಟ್‌ನಲ್ಲಿ ಭಾಷೆಯನ್ನು ಕೂಡ ತಂದಿಲ್ಲ. ಕೋರ್ಟಿನಲ್ಲಿ ಇವೊತ್ತು ಕೇಸ್ ಇದೆ. ಮೊಡಗೇಕರ್ ಸದಸ್ಯರು ತಮ್ಮ ಪ್ರಮಾಣ ಪತ್ರದಲ್ಲಿ ಏನು ಹೇಳಿದ್ದಾರೆಂದರೆ ನಾವು ಮರಾಠಿ ಭಾಷೆಯಿಂದಾಗಲೀ ಅಥವಾ ಎಂ.ಇ.ಎಸ್.ನಿಂದಾಗಲಿ ಗೆದ್ದಿಲ್ಲ ಎಂದು ಹೇಳಿದ್ದಾರೆ. ಅದಕ್ಕೆ ಅವರು ಇಲ್ಲಿ ಮರಾಠಿ ಭಾಷೆಯ ಬಗ್ಗೆ ಏಕೆ ಇಲ್ಲಿ ಒತ್ತಾಯ ಮಾಡುತ್ತಾರೆ. ಮತ್ತು ಮರಾಠಿ ಧ್ವಜದ ಬಗ್ಗೆ ಅವರು ಏಕೆ ಒತ್ತಾಯ ಮಾಡುತ್ತಾರೆಂಬ ಬಗ್ಗೆ ಸೃಷ್ಟೀಕರಣ ನೀಡಬೇಕೆಂದು ಪ್ರೊಫೆಸರ್ ಅವರು ಹೇಳಿದ್ದಾರೆ. ಅದರ ಬಗ್ಗೆ ಅವರು ಕ್ಲಾರಿಫೈ ಮಾಡುವುದು ಒಳ್ಳೆಯದು.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ನಮ್ಮ ಹಿರಿಯ ಸದಸ್ಯರಾದಂತಹ ಪ್ರೊಫೆಸರ್ ನಂಜುಂಡಸ್ವಾಮಿಯವರು ಬಹಳ ಮುಖ್ಯವಾದ ಪ್ರಶ್ನೆಯನ್ನು ಎತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಒಂದು ಸದನಕ್ಕೆ ಸೀಮಿತವಾಗಿ ಅವರು ಇಂಡಿಪೆಂಡೆಂಟ್ ಮೆಂಬರ್ಸ್. ನಮ್ಮ ಸದನದಲ್ಲಿ ರೆಕಗ್ನೈಸ್ ಮಾಡಿಲ್ಲ. ನಾವು ಹೊಸದಾಗಿ ಆ ಸ್ಟೇಟಸ್ ಕೊಡುತ್ತಿದ್ದೇವೆ. ಮಹಾರಾಷ್ಟ್ರದ ಏಕೀಕರಣ ಸಮಿತಿಯಿಂದ ಅವರು ಆಯ್ಕೆಯಾಗಿರಬಹುದು. ಸದನದಲ್ಲಿ ಅವರನ್ನು ಇಂಡಿಪೆಂಡೆಟ್ಸ್ ಎಂದು ಗುರುತಿಸಬಹುದು. ಅದು ನಮ್ಮ ಸದನದ ಸಂಪ್ರದಾಯ. 4 ಜನ ಇಂಡಿಪೆಂಡೆಂಟ್ ಸದಸ್ಯರು ಈ ಭಾವುಟದ ಬಗ್ಗೆ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಮಾಡುವುದಕ್ಕೆ ತಮ್ಮದೇ ಆದಂತಹ ರೀತಿಯಲ್ಲಿ ಕುಳಿತಿದ್ದಾರೆ. ಮುಖ್ಯವಾಗಿ 2ನೇ ವಿಚಾರವನ್ನು ತಮ್ಮ ಗಮನಕ್ಕೆ ತರತಕ್ಕದ್ದು

ಶಾಸನ ಸಭೆ ನಡೆಸುವಾಗ ಇಂತಹ ಧರಣಿಗಳು ಅಪರೂಪವೇನಲ್ಲ. ಆದರೆ ಈ ಧರಣಿಗೂ ಸಾಧಾರಣವಾಗಿ ನಡೆಯತಕ್ಕ ಧರಣಿಗೂ ಒಂದು ವ್ಯತ್ಯಾಸ ಇದೆ. ಅಲ್ಲಿ ಕೆಲವು ಇಷ್ಯೂಸ್ ಮೇಲೆ ನಾವು ಧರಣಾ ಮಾಡಿದ್ದೇವೆ. ಆದರೆ ಇಲ್ಲಿ ಸದನದ ನಿರ್ಣಯದ ವಿರುದ್ಧ ಧರಣಾ ಮಾಡುತ್ತಿದ್ದಾರೆ. ಮೂಲತಃ ಇದು ಪ್ರಶ್ನೆ. ಸದನದ ನಿರ್ಣಯದ ವಿರುದ್ಧ ಧರಣಾ ಮಾಡಬಹುದೇ? ನಾನು ಅವರಿಗೂ ಕೂಡ ಈ ಸದನದ ಹೊರಗಡೆಯೂ ಹೇಳಿದ್ದೇನೆ. ನಿಮಗೇನಾದರೂ ಇದರಿಂದ ಪರಿಹಾರ ಬೇಕೆಂದರೆ ಇರತಕ್ಕ ಮಾರ್ಗ ಒಂದೇ, ಅದು ಶಾಸನವನ್ನು ಪ್ರಶ್ನೆ ಮಾಡತಕ್ಕದ್ದು. ಈ ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಮತ್ತೆ ಅವಕಾಶವಿಲ್ಲ. ನಿಮಗೆ ಇದ್ದಂತಹ ಅವಕಾಶವನ್ನು ಕಳೆದುಕೊಂಡಿರೆಂತಲೂ ಹೇಳಿದ್ದೇನೆ. ಹೊರಗಡೆಯೂ ಹೇಳಿದ್ದೇನೆ. ಒಳಗಡೆಯೂ ಹೇಳಿದ್ದೇನೆ. ಈಗಲೂ ಪುನಃ ಅವರಿಗೆ ಹೇಳುತ್ತೇನೆ. ಅವರಿಗೆ ಸದನದಲ್ಲಿದ್ದಂತಹ ಅವಕಾಶವನ್ನು ನಾವು ಯಾರು ತಡೆಹಿಡಿದಿಲ್ಲ. ತಾವು ತಡೆಹಿಡಿಯಲಿ. ಯಾವ ಪಕ್ಷದ ಸದಸ್ಯರೂ ತಡೆಹಿಡಿಯಲಿ.

ಆದರೆ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಮಾಡತಕ್ಕಂಥ ಅವಕಾಶವನ್ನು ಪ್ರಾರಂಭಿಕವಾಗಿದ್ದಂಥ ಅವಕಾಶವನ್ನು ಅವರೇ ಕಳೆದುಕೊಂಡಿದ್ದಾರೆ. ಅವರು ಕುಳಿತಿದ್ದು ಚರ್ಚೆಮಾಡಬಹುದಾಗಿತ್ತು ಅಥವಾ ಅದಕ್ಕೆ ವಿರುದ್ಧ ವ್ಯಕ್ತಮಾಡಬಹುದಿತ್ತು. The opposition will have the say and the Government will have its way.

ಈ ಸರ್ಕಾರ ಮತ್ತು ವಿರೋಧಪಕ್ಷ ಎನ್ನವುದಕ್ಕಿಂತಲೂ ಒಟ್ಟಾರೆ ಒಂದು ಇಡೀ ವಿಧಾನಸಭೆ ಪಾಸ್ ಮಾಡಿರತಕ್ಕಂಥ ಶಾಸನವನ್ನು ಪ್ರತಿಭಟನೆ ಮಾಡಿ ಇಲ್ಲಿ ಕೂರತಕ್ಕದ್ದು ಸರಿಯಾದ ಕ್ರಮ ಅಲ್ಲ. ಅಂತಾದ್ದು ಏನಾದರೂ ತಪ್ಪು ಎಂದು ಹೇಳಿ ಅವರಿಗೆ ಕಂಡರೆ, ಈಗ ರಾಜ್ಯಾಂಗದ ವಿಚಾರವನ್ನು ಎತ್ತಿದ್ದಾರೆ. ಈ ಶಾಸನ ಸಭೆಗೆ ಅಧಿಕಾರ ಇಲ್ಲ ಎಂದು ಹೇಳಿದ್ದಾರೆ. ಇವೆಲ್ಲಾ ಪ್ರಶ್ನೆಗಳಿಗೂ ನಾವೆಲ್ಲ ಉತ್ತರ ಕೊಡುವುದು. ಆಗ ಅವರು ಹೇಳಿದ್ದರೆ ಉತ್ತರ ಕೊಡುವುದಕ್ಕೆ ತಾವು ಪ್ರಯತ್ನ ಮಾಡುತ್ತಿದ್ದಿರಿ. ಆಗ ಪ್ರಯತ್ನ ಮಾಡದೇ ಈಗ ಧರಣಿ ಕೂರತಕ್ಕದ್ದು ಸರಿಯಾದ ಕ್ರಮ ಅಲ್ಲ. ಅದಕ್ಕಾಗಿಯೇ ನಾನು ಪದೇಪದೇ ಹೇಳುತ್ತಿದ್ದೇನೆ, ನಮ್ಮ ಅನುಭವದ ಆಧಾರದ ಮೇಲೆ ಅವರು ಈ ಕೆಲಸವನ್ನು ಇಲ್ಲಿ ಮಾಡುವುದು ಇಡೀ ಒಂದು ಸದನದ ಘನತೆಗೆ ಸದನದ ತೀರ್ಮಾನಕ್ಕೆ ಮತ್ತು ಮಾಡಿದಂಥ ಶಾಸನಕ್ಕೆ ಅಪಚಾರವಾಗುತ್ತದೆ. ಆದ್ದರಿಂದ ಅವರು ಈ ಕೆಲಸ ಮಾಡುವುದನ್ನು ಬಿಟ್ಟು ತಮಗೆ ಇರತಕ್ಕಂಥ ಬೇರೆ ಬೇಡಿಕೆಗಳನ್ನು ಅವರು ಬಳಸಿಕೊಳ್ಳಬೇಕು, ಇಲ್ಲಿ ಹಠ ಮಾಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಮಾನ್ಯ ವಾಟಾಳ್ ನಾಗರಾಜ್‌ರವರು ಇಲ್ಲಿ ಮಾತನಾಡುವಾಗ ಸ್ವಲ್ಪ ಉದ್ವೇಗದಿಂದ ಮಾತನಾಡುತ್ತಾರೆ, ನಿಜ. ಏಕೆಂದರೆ ಇಂತಹ ಕೆಲಸವನ್ನು ಮಾಡಲಿಕ್ಕೆ ಅವರು ಜನರಿಗೆ ಮಾತು ಕೊಟ್ಟು ಇಲ್ಲಿ ಬಂದಿದ್ದಾರೆ. ನಾವು ಅದರಿಂದ ಹೊರತಾಗಿದ್ದೇವೆಂದು ಅಲ್ಲ, ಆ ಕಾರಣ ಹೆಚ್ಚು ಮಾತನಾಡುತ್ತಾರೆ ಅಂದುಕೊಳ್ಳುವುದು ಸರಿಯಲ್ಲ. ಅವರು ಈಗ ಸಭಾ ತ್ಯಾಗ ಮಾಡಿದ್ದಾರೆ. ಮತ್ತೆ ಇನ್ನು ಬೇರೆಯವರಿಗೆ ಮತ್ತೊಂದು ಹಾದಿ ಮಾಡಿಕೊಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಸಭೆಯೊಳಗೆ ಇದ್ದುಕೊಂಡೇ ಶಾಸನದ ಮತ್ತು ಈ ಸಭೆಯ ಗೌರವವನ್ನು ಕಾಪಾಡುವುದಕ್ಕೆ ನಾವೆಲ್ಲಾ ಒಂದಾಗಿ ನಿಂತುಕೊಳ್ಳಬೇಕೆಂದು ಹೇಳುತ್ತೇನೆ. ವೈಯಕ್ತಿಕವಾಗಿ ಅದರ ಪರ ಅಥವಾ ವಿರೋಧದ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಿಲ್ಲ. ಒಟ್ಟಾರೆ ಸಭೆಯ ನಿರ್ಣಯಕ್ಕೆ ನಾವು ಇಲ್ಲಿ ನಿಂತು ಚರ್ಚೆ ಮಾಡಬೇಕೇ ಹೊರತು ಹೊರಗೆ ಹೋಗಿ ಚರ್ಚೆ ಮಾಡತಕ್ಕಂತಾದ್ದು ಸರಿ ಎಂದು ಹೇಳಿ ನಾನು ಅಂದುಕೊಳ್ಳುವುದಿಲ್ಲ. ಈ ಕಾರಣದಿಂದ ನಾನು ಮತ್ತೊಮ್ಮೆ ಹೇಳುತ್ತೇನೆ, ಈ ಒಂದು ವೇದಿಕೆಯನ್ನು ಈ ರೀತಿ ಅವರು ಬಳಸಿಕೊಳ್ಳುವುದು, ಶಾಸನಕ್ಕೆ ಮತ್ತು

ಸಭೆಗೆ ಅಗೌರವವಾಗುತ್ತದೆ. ಆ ಕೆಲಸವನ್ನು ಅವರು ಮಾಡಬಾರದು. ಮೊದಲು ಅವರು ಈ ಶಾಸನಸಭೆ ಸದಸ್ಯರು ಅವರು ಹೊರಗಡೆ ಇರುವಾಗ ಎಂ.ಇ.ಎಸ್.ನವರು. ಇಲ್ಲಿ ನಾವು ಎಂ.ಇ.ಎಸ್. ಎಂದು ಗುರುತಿಸಿಲ್ಲ. ಗುರುತಿಸತಕ್ಕಂಥ ಪ್ರಯತ್ನವನ್ನು ತಾವು ಮಾಡಲಿಲ್ಲ. ಇನ್ನೂ ಯಾರೂ ಎಂ.ಇ.ಎಸ್. ಎಂದು ಕರೆದಿಲ್ಲ. ಅವರು ಹೊರಗಡೆ ಎಂ.ಇ.ಎಸ್.ನವರು ಈ ಸದನದ ದೃಷ್ಟಿಯಿಂದ ಅವರು ಸದಸ್ಯರು. ಅವರು ಯಾವ ಪಕ್ಷಕ್ಕೆ ಸೇರಿದವರು, ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಆದ್ದರಿಂದ, ಸದನಕ್ಕೆ ಮಾನ್ಯತೆ ಅವರು ಮೊದಲು ಕೊಡಬೇಕು ಆಮೇಲೆ ಉಳಿದ ವಿಚಾರ ಚರ್ಚೆ ಮಾಡಬೇಕು.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ಸದಸ್ಯರುಗಳು ಇವೊತ್ತು ಏನು ಧರಣಿ ಕುಳಿತಿದ್ದಾರೆ, ಅವರು ಮತ್ತೊಮ್ಮೆ ಈ ಬಗ್ಗೆ ವಿಚಾರ ಮಾಡತಕ್ಕಂಥ ಅವಶ್ಯಕತೆ ಹೆಚ್ಚಾಗಿದೆ. ಆಗಿರತಕ್ಕಂಥ ನಿರ್ಣಯ, ಇಲ್ಲಿ ಒಂದು ಕಾನೂನು ಪಾಸ್ ಮಾಡತಕ್ಕಂಥ ಸಂದರ್ಭದಲ್ಲಿ ಸದನದ ಬಹುಮತ ಇರಬಹುದು, ಸರ್ವಾನುಮತ ಇರಬಹುದು, ಹೇಗೇ ಇರಬಹುದು, ಒಂದು ಸಾರಿ ಒಂದು ನಿರ್ಣಯವನ್ನು ತೆಗೆದುಕೊಂಡಮೇಲೆ ಅದು ಸದನದ ನಿರ್ಣಯವಾಗುತ್ತದೆ, ತೀರ್ಪು ಆಗುತ್ತದೆ, ತೀರ್ಮಾನವಾಗುತ್ತದೆ. ಒಂದು ಸಾರಿ ಅದು ಆದಮೇಲೆ ಅಭಿಪ್ರಾಯ ವಿಭಿನ್ನವಾಗಿ ಕೂಡ ಬರಬಹುದು. ಅಲ್ಲಿ ಸದನದಲ್ಲಿ ಈ ವಿಚಾರ ನಡೆಯತಕ್ಕಂಥ ಸಂದರ್ಭದಲ್ಲಿ ಸದಸ್ಯರು ಅವರು ಇರಲಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅವರು ಇಲ್ಲದಿದ್ದರೂ ಕೂಡ ಈ ಸದನದ ನಿರ್ಣಯಕ್ಕೆ ಪ್ರತಿಯೊಬ್ಬರೂ ಕೂಡ ಒಳಪಡುತ್ತಾರೆ. ಆ ಸಂದರ್ಭದಲ್ಲಿ ಅವರು ಇದ್ದಿದ್ದರೆ ಏನಾಗುತ್ತಿತ್ತು ಎನ್ನತಕ್ಕ ವಿಚಾರ ಇದೆ. ಅವರು ಇದ್ದಿದ್ದರೆ, ವಿರೋಧ ಮಾಡತಕ್ಕಂಥ ಹಕ್ಕು ಅವರಿಗೆ ಇರುತ್ತಿತ್ತು. ಅವರ ಹಕ್ಕು ಏನಿದೆ. ಅದನ್ನು ನಾನು ಪ್ರಶ್ನೆ ಮಾಡುವುದಿಲ್ಲ. ಏಕೆಂದರೆ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಹಾಗೆ ಇಲ್ಲಿ ಸದನದಲ್ಲಿ ಒಬ್ಬ ಸದಸ್ಯನಾಗಿರುತ್ತಾನೆ. ಪಕ್ಷ ಪಂಗಡಗಳ ಪ್ರಶ್ನೆ ಅದು ಕಾನೂನು ಪ್ರಕಾರ ಹೇಗೆ ಇದೆ ಎಂದು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಆದ್ದರಿಂದ, ಇಲ್ಲಿ ಅವರು ಒಂದು ಪಕ್ಷದವರೇ ಹೇಗೆ ಎಂಬುದು ಅದು ನಮಗೆ ಬೇಕಾಗಿಲ್ಲ. ತಾವು ಹೇಳಿದ ಹಾಗೆ ಈ ಸದನದ ಮಾನ್ಯ ಸದಸ್ಯರು ನಾವು ಅದು ರೆಕಗ್ನೈಸ್ ಆಗಿರತಕ್ಕಂಥ ವಿಚಾರ. ಅದಕ್ಕಿಂತಲೂ ಹೆಚ್ಚಾಗಿ ಈ ಪೊಲಿಟಿಕಲ್ ಪಾರ್ಟಿಯನ್ನು ನಮ್ಮ ನಮ್ಮ ಇದಕ್ಕೋಸ್ಕರ ನಾವೇ ಇಟ್ಟುಕೊಂಡಿರತಕ್ಕಂಥ ಒಂದು ವ್ಯವಸ್ಥೆ.

ಈ ಸಂದರ್ಭದಲ್ಲಿ ಒಂದು ತೀರ್ಪು ನಿರ್ಣಯದ ಮುಖಾಂತರ ಆದಮೇಲೆ ಅದನ್ನು ಪ್ರಶ್ನೆ ಮಾಡತಕ್ಕದ್ದು ಸರಿಯಲ್ಲ. ನಾವು ಆಕಡೆ ಇದ್ದಾಗ ಮುಷ್ಕರ, ಸಭಾತ್ಯಾಗ, ಧರಣಿ ಮುಂತಾದುವುಗಳನ್ನು ಮಾಡಿದ್ದೇವೆ. ಈಗ ಇಲ್ಲಿ ಒಂದು ನಿರ್ಣಯ ಪಾಸಾದಮೇಲೆ, ಆ ಬಗ್ಗೆ ಪ್ರಶ್ನೆ ಮಾಡಿದರೆ, ನಿರ್ಣಯವನ್ನೆ ಇಲ್ಲಿ ಪ್ರಶ್ನೆ ಮಾಡಿದಂತಾಗುತ್ತದೆಂದು ಅವರ ಅಭಿಪ್ರಾಯವನ್ನು ನಾನು ಮತ್ತೊಮ್ಮೆ ಹೇಳುತ್ತಿದ್ದೇನೆ. ಈ ನಿರ್ಣಯವನ್ನೇ ಪ್ರಶ್ನೆ ಮಾಡುವುದಕ್ಕೆ ಹೋದರೆ, ಈ ಸದನ ಮತ್ತು ಮಾನ್ಯ ಅಧ್ಯಕ್ಷರನ್ನೇ ಪ್ರಶ್ನೆ ಮಾಡಿದಂತಾಗುತ್ತದೆ.

ಇದು ಬಹಳ ಮುಖ್ಯವಾದ ವಿಚಾರ. ಈ ವಿಚಾರವನ್ನು ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯ ವೀರಪ್ಪಮೊಯ್ಲಿಯವರೂ ಕೂಡ ಬಹಳ ವಿವರವಾಗಿ ಎತ್ತಿದ್ದಾರೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರೂ ಎತ್ತಿದ್ದಾರೆ, ಅಷ್ಟೇ ಅಲ್ಲ, ಇನ್ನೂ ಬೇರೆಬೇರೆ ಮಾನ್ಯ ಸದಸ್ಯರು ಯಾರ್‍ಯಾರು ಇದರ ಬಗ್ಗೆ ಮಾತನಾಡಿದ್ದಾರೆ, ಅವರೆಲ್ಲರೂ ಕೂಡ ಇದೇ ಅಭಿಪ್ರಾಯವನ್ನು ಎತ್ತಿದ್ದಾರೆ. ಇದರ ಬಗ್ಗೆ ಅವರೂ

ಕೂಡ ಭಿನ್ನಾಭಿಪ್ರಾಯವನ್ನು ಇಟ್ಟುಕೊಂಡಿರಲಾರರು ಎಂದು ನಾನು ಭಾವಿಸಿದ್ದೇನೆ. ಅದು ಬರುವುದಕ್ಕೆ ಸಾಧ್ಯವಿಲ್ಲ. ಒಂದು ಸಾರಿ ತೀರ್ಪು ಬಂದಮೇಲೆ ಅದನ್ನು ಎಲ್ಲರೂ ಒಪ್ಪಿಕೊಳ್ಳಬೇಕು. ಅದನ್ನು ಪ್ರಶ್ನೆ ಮಾಡಬೇಕೆಂದರೆ ಅದಕ್ಕೆ ಬೇರೆ ವೇದಿಕೆ ಆಗುತ್ತದೆ. ತಕ್ಷಣ ಷಿಷ್ಟ್ ಆಗುತ್ತದೆ. ನಾಳೆ ಆಕ್ಟ್ ಬಂದ ಮೇಲೆ ವಿಧಿವಿಧಾನಗಳಾಗಿ ಬಂದಮೇಲೆ, ಆ ಮನೆಗೆ ಹೋಗುತ್ತದೆ. ಆ ಮನೆಗೆ ಹೋದಮೇಲೆ ಅಲ್ಲಿ ಅದು ಏನಾಗುತ್ತದೋ ನಮಗೆ ಗೊತ್ತಿಲ್ಲ. ಮಾನ್ಯ ರಾಜ್ಯಪಾಲರ ರುಜು ಆಗಿ ಕಾನೂನು ಆಗಿ ಬಂದಮೇಲೆ ಅದನ್ನು ಕೊಶ್ಚನ್ ಮಾಡತಕ್ಕ ವಿಚಾರ ಅವರಿಗೆ ಬಿಟ್ಟಿರತಕ್ಕ ಹಕ್ಕು. ಅದು ಈ ಸದಸದ ಹೋರಗೆ ನಡೆಯುವ ಕಾರ್ಯಕಲಾಪ ಆಗುತ್ತದೆ. ಆದರೆ ಈ ಸದನದಲ್ಲಿ ಮಾತ್ರ ಇದಕ್ಕೆ ಸೀಮಿತವಾಗಿ ಹೇಳುವುದಾದರೆ ನಮ್ಮ ಈ ಸದನದಲ್ಲಿ ಇದು ಮುಗಿದು ಹೋಗಿದೆ. ನಾವು ಆ ಕೆಲಸವನ್ನು ಮುಗಿಸಿದ್ದಾಗಿದೆ. ಈಗ ಇದನ್ನೇ ಮತ್ತೊಮ್ಮೆ ಕೇಳುವುದಕ್ಕೆ ಈ ಸದಸಕ್ಕೆ ಅಧಿಕಾರ ಬರುವುದಿಲ್ಲ. ಆದುದರಿಂದ, ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಹೇಳಿದಹಾಗೆ, ತಾವು ಹೇಳಿದಹಾಗೆ, ಇಡೀ ಸದನದ ಎಲ್ಲರೂ ಹೇಳಿದಹಾಗೆ, ಈ 4 ಜನ ಮಾನ್ಯ ಸದಸ್ಯರು ಇಲ್ಲಿ ಏನೂ ಧರಣಿಯನ್ನು ಮಾಡುತ್ತಿದ್ದಾರೆ, ಅವರಿಗೆ ನಾನು ವಿನಂತಿಮಾಡಿಕೊಳ್ಳುತ್ತಿದ್ದೇನೆ. ಮಾನ್ಯ ವಿರೋಧಪಕ್ಷದ ನಾಯಕರು ವಿನಂತಿ ಮಾಡಿದ್ದಾರೆ, ಮಾನ್ಯ ಸಚಿವರೂ ವಿನಂತಿ ಮಾಡಿದ್ದಾರೆ, ನಾವೆಲ್ಲರೂ ಸೇರಿ ವಿನಂತಿಮಾಡಿಕೊಂಡಿದ್ದೇವೆ. ಈ ಸಂದರ್ಭದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರೂ, ಬಿ.ಜೆ.ಪಿ.ಯ ಮಾನ್ಯ ಈಶ್ವರಪ್ಪನವರೂ ಧರಣಿ ಕುಳಿತಿದ್ದರು. ಅವರು ಈಗ ಸದನದಿಂದ ಹೊರಗಡೆ ಹೋಗಿದ್ದಾರೆ. ಅವರು ಧರಣಿ ಕೂರುವುದು ಕೂಡ ಅನವಶ್ಯಕವಿತ್ತು. ಅವರೂ ಕೂಡ ಧರಣಿಯನ್ನು ಕೂತುಕೊಳ್ಳುವುದಕ್ಕೆ ಕಾರಣವೇನೂ ಇರಲಿಲ್ಲ. ಅವರೂ ಕೂಡ ಧರಣಿ ಕುಳಿತಿದ್ದಿದ್ದರೆ ಇದೇ ಪರಿಸ್ಥಿತಿ ಆಗುತ್ತಿತ್ತು. ಈ ನಿರ್ಣಯವನ್ನು ಪ್ರಶ್ನೆ ಮಾಡುವುದಾದರೆ, ಅವರು ಧರಣಿ ಕುಳಿತಿದ್ದರೂ ಕೂಡ ತಪ್ಪಾಗುತ್ತಿತ್ತು. ಅವರು ಅದನ್ನು ನೋಡಿಕೊಂಡೇ ಇದು ತಪ್ಪಾಗುತ್ತದೆಂದು ಮನವರಿಕೆ ಮಾಡಿಕೊಂಡು ಸಭಾತ್ಯಾಗ ಮಾಡಿದರೇನೋ ಎಂದು ನನಗೆ ಅನಿಸುತ್ತದೆ. ಅವರು ಸಭಾತ್ಯಾಗ ಮಾಡಿದರೂ ಕೂಡ ಅದು ನಿಯಮಕ್ಕೆ ವಿರುದ್ಧವಾಗುತ್ತದೆ. ಅವರು ಈ ಅಭಿಪ್ರಾಯವನ್ನುಪಟ್ಟುಕೊಂಡೇ ಹೊರಗೆ ಹೋಗಿದ್ದಾರೆ. ಆದರೆ ಅದರ ಅವಶ್ಯಕತೆ ಇರಲಿಲ್ಲ. ಈಗ ಮಾನ್ಯ ಸದಸ್ಯರು ಏನು ಧರಣಿಯಲ್ಲಿ ಇಲ್ಲಿ ಕೂತಿದ್ದಾರೆ, ಅವರಲ್ಲಿ ನಾನು ಅತ್ಯಂತ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ, ದಯವಿಟ್ಟು ತಮ್ಮತಮ್ಮ ಸ್ಥಾಸ್ಥ್ಯಗಳಿಗೆ ತಾವೆಲ್ಲರೂ ಹೋಗಿ. ನಾವೆಲ್ಲರೂ ಸೇರಿ ಇದೇ ಅಭಿಪ್ರಾಯವನ್ನು ಸದನದ ಮುಂದಿಟ್ಟಿದ್ದೇವೆ. ತಾವು ಈ ಸದನದ ಗೌರವಾನ್ವಿತ ಸದಸ್ಯರು. ಆ ಕಡೆಯವರು, ಈ ಕಡೆಯವರು ಅಂತ ಅಲ್ಲ, ನಾವೆಲ್ಲರೂ ತಮಗೆ ಗೌರವವನ್ನು ಕೊಡುತ್ತೇವೆ. ತಮ್ಮ ಹಕ್ಕು ಏನಿದೆ, ಅದನ್ನು ಚಲಾವಣೆ ಮಾಡತಕ್ಕ ಸಂದರ್ಭ ಬಂದರೆ ಅಥವಾ ಬೇರೆಕಡೆ ಚಲಾವಣೆ ಮಾಡುವುದಾದರೆ ಮಾಡಿ. ತಾವು ಇವತ್ತು ಈ ಸದನದ ಗೌರವಾನ್ವಿತ ಸದಸ್ಯರಾಗಿ, ಈ ಸದಸಕ್ಕೆ ಇರತಕ್ಕಂಥ ಘನತೆ ಗೌರವಗಳನ್ನು ಕಾಪಾಡುವ ವಿಚಾರದಲ್ಲಿ ತಾವೆಲ್ಲರೂ, ಭಾಗಿಯಾಗಿ ಬಂದಿದ್ದೀರಿ. ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂಬುದು ನಮ್ಮೆಲ್ಲರ ಆಸೆ. ಆದುದರಿಂದ ಮಾನ್ಯ ಅಧ್ಯಕ್ಷರ ಮಾಖಾಂತರ ತಮ್ಮಲ್ಲಿ ವಿನಂತಿಮಾಡಿಕೊಳ್ಳುತ್ತೇನೆ, ದಯವಿಟ್ಟು ತಮ್ಮತಮ್ಮ ಸ್ಥಾನಗಳಿಗೆ ಹೋಗಿ. ಈ ನಿರ್ಣಯವನ್ನು ತಾವೆಲ್ಲರೂ ಒಪ್ಪಿಕೊಳ್ಳಬೇಕು. ಮತ್ತೆ ಇದರ ಬಗ್ಗೆ ಪ್ರಶ್ನೆ ಮಾಡತಕ್ಕ ಅವಶ್ಯಕತೆ ಇಲ್ಲ ಎನ್ನತಕ್ಕ ಅಂಶವನ್ನು ತಾವು ತಿಳಿದುಕೊಳ್ಳಬೇಕು ಎನ್ನತಕ್ಕ ಮಾತನ್ನು ಹೇಳಿ, ದಯವಿಟ್ಟು ತಾವು ಕುಳಿತಿರತಕ್ಕ ಜಾಗದಿಂದ ಮೇಲೆದ್ದು ತಮ್ಮತಮ್ಮ ಸ್ಥಾನಗಳಿಗೆ ಹೋಗಬೇಕೆಂದು ನಮ್ಮೆಲ್ಲರ ವಿನಂತಿ.

ಉಪಾಧ್ಯಕ್ಷರು : ಈಗ ತಾವುಗಳು ತಮ್ಮತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಬೇಕು.

Sri S. Bangarappa : Please go back to your seats. If you want to say something, you say from your seats.

Sri B.I. Patil (UCHAGAON) : We, the Marathi speaking group of M.L.A.s have strong objections for the introduction and passing of Karnataka Local Authorities (Amendment) Bill, 1991. Our points of objections are as follows:

You have not considered the effects of the said bill.

The said bill was not published in the Official Gazette and 30 days time is not granted to general public to file their objections. hence the said bill is premature and it cannot be passed in the House at the instance of one opposition member. Expunged on ordered the Chair.

This Bill is introduced with the oblique motive and the State intends to remove the flag from the building of Corporation Belgaum. The said Flag is hoisted in the year 1958 as per resolution No. 12 dated 3.7.1958 and it is flying there without any objections till today. For your information, the Hon'ble Sri B. Shankaranand, Ex. M.P. was the Member of Belgaum Municipal Council at that time. The said Flag (Bhagva Zenda) is a symblo of national integrity, heroism and peace and it has got historical background. The said flag is flying nearby to the National Flag and there is no reason to remove the same under the protection of the said illegal bill.

The State Government has no powers to sanction any type of flag for display on any public place as well as Government offices of City Municipal Council, Town Municipal Council and karnataka Municipal Corporation. The said bill has no sanctity of law and it is unconstitutional.

There will be law and order problem in Belgaum area as well as in Border area, and the people will resort to agitations if the said flag is removed from the Belgaum Corporation building under the protection of the said Act.

The State Legislature has no competence to make a law regarding display of Notional Flag to accord approval either under State List or under the Concurrent list under the schedule to the constitution.

We request the Government to withdraw the said Act in the interest of the people and the State, and to re-consider this Bill.

Therefore, we walk-out demanding reconsideration of this Bill.

(Hon. Members Sri B.I. Patil and there others withdrew at this stage.)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸದಸ್ಯರಾದ ಬಿ.ಐ. ಪಾಟೀಲರು ನನ್ನ ಬಗ್ಗೆ ಜವಾಬ್ದಾರಿಯಿಂದ ಹೇಳುತ್ತಿಲ್ಲ. ವಾಟಾಳ್ ನಾಗರಾಜ್‌ರವರು ಏನೇನು ಮಾಡಿದ್ದಾರೆಂಬುದನ್ನೆಲ್ಲ ಹೇಳಿದ್ದು ಅವಿವೇಕದ ಪರಮಾವಧಿ. ಅವರು ಈ ಮಾತನಾಡಬಾರದಾಗಿತ್ತು ಇದು ಸರಿಯಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ ಏನು ಹೇಳಿಕೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ, ಇದರ ಬಗ್ಗೆ ನಾವು ಈಗಾಗಲೇ ಸಾಕಷ್ಟು ಆ ಕಡೆ ಸದಸ್ಯರು, ಮತ್ತು ಈ ಕಡೆ ಸದಸ್ಯರು ಹೇಳಿದ್ದೇವೆ. ಈ ಹಂತದಲ್ಲಿ ಅವರು ಆಕ್ಷೇಪಣೆಯನ್ನು ಎತ್ತಲಿಕ್ಕೆ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಕಡತದಿಂದ ತೆಗೆಯಿರಿ. ಅವರಿಗೆ ಹೇಳಿಕೆಯನ್ನು ಮಾಡಲು ಅವಕಾಶವನ್ನು ಕೊಟ್ಟದ್ದೇ ಸರಿಯಿಲ್ಲ. ಅದು ಆಗಬಾರದಾಗಿತ್ತು.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ ವಾಟಾಳ್ ನಾಗರಾಜ್ ಎಂದು ಹೆಸರಿಸಿ ಅವರ ಮೇಲೆ ಆರೋಪ ಮಾಡಿದ್ದಾರೆ. ದಯವಿಟ್ಟು ಅದನ್ನು ಕಡತದಿಂದ ತೆಗೆಸಬೇಕು.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಕಡತದಿಂದ ತೆಗೆಯಬೇಕು.

(ಗೊಂದಲ)

ಅಧ್ಯಕ್ಷರು : ನಿಮ್ಮ ಲೀಡರ್ ಏನು ಹೇಳುತ್ತಾರೋ ಹೇಳಲಿ.

ಶ್ರೀ ಡಿ.ಬಿ. ಚಂದ್ರೇಗೌಡ : ಅವರಿಗೆ ತಾವು ಅವಕಾಶವನ್ನು ಕೊಟ್ಟಿದ್ದೀರಿ ಅದಕ್ಕೆ ನಾವು ಅಡ್ಡಿ ಬರುವುದಿಲ್ಲ. But we will have our right. We will reserve our right to protest that.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಶ್ರೀಯುತ ವಾಟಾಳ್ ನಾಗರಾಜ್‌ರವರ ಬಗ್ಗೆ ಅವರು ಹೇಳಿರುವುದನ್ನು ಕಡತದಿಂದ ತೆಗೆಯಬೇಕೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಹೌದು, ನನ್ನ ಮೇಲೆ ಹೇಳಿದ್ದಾರೆ. ಅದನ್ನು ಕಡತದಿಂದ ತೆಗೆಸಬೇಕು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಸದಸ್ಯರಿಗೆ ಓದಲಿಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ಓದುವಾಗ ಅವರು ಆ ಶಬ್ದಗಳನ್ನು ಉಪಯೋಗಿಸಿರುವುದನ್ನು ಕಡತದಿಂದ ತೆಗೆಯಬೇಕು.

ಶ್ರೀ ವಾಟಾಳ್ ನಾಗರಾಜ್ : ಅದನ್ನು ಕಡತದಿಂದ ತೆಗೆಸಬೇಕು.

ಉಪಾಧ್ಯಕ್ಷಣೆಯವರು: ಮಾನ್ಯ ಕೌಜಲಗಿಯವರೇ ತಾವು ಏನು ಹೇಳುತ್ತೀರಿ ಹೇಳಿ.

ಶ್ರೀ ಎಸ್.ಹೆಚ್. ಕೌಜಲಗಿ : ಮಾನ್ಯ ವಾಟಾಳ್ ನಾಗರಾಜ್‌ರವರು ಕಮ್ಯುನಲ್ ಹಾರ್ಮನಿ ಮಾಡುತ್ತಾರೆಂದು ಮತ್ತು ಆಂಟಿ ಸೋಸಿಯಲ್ ಎಂದು ಅವರ ಬಗ್ಗೆ ಹೇಳಿದ್ದಾರೆ. ಆ ಶಬ್ದಗಳನ್ನು ಕಡತದಿಂದ ತೆಗೆಯಬೇಕೆಂದು ಹೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ಹೇಳಿದ್ದನ್ನು ಸರಿಯಾಗಿ ಕೇಳಿಸಿಕೊಳ್ಳುವುದಕ್ಕಾಗಲಿಲ್ಲ. ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಆ ಪ್ರಕಾರ ಅವರು ಹೇಳಿದ್ದನ್ನು ಕಡತದಿಂದ ತೆಗೆಸಬೇಕೆಂದು ಹೇಳುತ್ತೇನೆ.

ಶ್ರೀ ಬಸವರಾಜರಾಯರೆಡ್ಡಿ : ವಾಟಾಳ್ ನಾಗರಾಜ್ ಅವರ ಬಗ್ಗೆ ಕಮ್ಯುನಲ್ ಹಾರ್ಮನಿ ಎಂದು ಹೇಳಿರತಕ್ಕ ಮಾತುಗಳನ್ನು ಕಡತದಿಂದ ತೆಗೆಸಬೇಕೆಂದು ನಾನು ಸಹ ನಮ್ಮ ಉಪನಾಯಕರ ಮಾತಿಗೆ ಧ್ವನಿಗೂಡಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ಅವರು ಹೇಳಿದ್ದು ನಮಗೂ ಸರಿಯಾಗಿ ಕೇಳಿಸಲಿಲ್ಲ, ನಿಮಗೂ ಕೇಳಿಸಲಿಲ್ಲ. ಅವರು ಏನು ಬೇಕಾದರೂ ಹೇಳಲಿ. ಆದರೆ ವಾಟಾಳ್

ನಾಗರಾಜು ಅವರ ಬಗ್ಗೆ ಕಮ್ಯುನಲ್ ಹಾರ್ಮ್‌ನ ಬಗ್ಗೆ ಮತ್ತೊಂದು ಹೇಳಿದ್ದರೆ ಅದು ಸರಿಯಲ್ಲ. ಅದನ್ನು ನೋಡಿ ಇವತ್ತೇ ಕಡತದಿಂದ ತೆಗೆಸಬೇಕು. ಏಕೆಂದರೆ ನಾಳೆ ಅದು ಪತ್ರಿಕೆಯಲ್ಲಿ ಬರಬಾರದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಇದು ಕೇವಲ ವಾಟಾಳ್ ನಾಗರಾಜ್ ಅವರ ಮೇಲೆ ಮಾಡಿದಂತಹ ಟೀಕೆಗಳಾಗಲಿ ಅಥವಾ ಅದಕ್ಕೆ ಸಂಬಂಧಪಟ್ಟ ಹಾಗೆ ಮಾಡುವುದಕ್ಕೆ ಸೀಮಿತವಾದುದಲ್ಲ. ಈಗ ಪ್ರಶ್ನೆ ಇರುವುದು, ಒಂದು ಮಸೂದೆಯನ್ನು ಸರ್ವಾನುಮತದಿಂದ ಅಥವಾ ಬಹುಮತದಿಂದ ಈ ಸದನ ಒಪ್ಪಿಕೊಂಡ ಮೇಲೆ ಮತ್ತೆ ಚರ್ಚೆ ಮಾಡುವುದಕ್ಕೆ ಅವಕಾಶ ಇರಬಾರದು. ಅದನ್ನು ಅವರು ಬೇರೆ ನಿಯಮದ ಪ್ರಕಾರ ತರಬಹುದು. ಇವತ್ತು ನಡೆದಂತಹ ವಿಚಾರ ಏನಿದೆ, ಅದು ನಿಮ್ಮ ಯಾವುದೇ ನಿಯಮದ ಚೌಕಟ್ಟಿನೊಳಗೆ ಬಾರದೆ ಇರುವಂತಹ ವಿಚಾರ. ಆದಕಾರಣ ವಾಟಾಳ್ ನಾಗರಾಜ್ ಅವರ ಮೇಲೆ ಮಾಡಿದಂತಹ ಟೀಕೆಯನ್ನು ಕಡತದಿಂದ ತೆಗೆಯುವ ಪ್ರಶ್ನೆ ಅಲ್ಲ. ಈ ಮಸೂದೆ ಬಗ್ಗೆ ಇವ್ವೊತ್ತೆ ಬೆಳಗಿನಿಂದ ಏನೇನು ನಡೆಯಿತು ಅದು ಪೂರ್ತಿ ಕಡತದಿಂದ ಆಚೆ ಹೋಗಬೇಕೆಂದು ಹೇಳುವವನು ನಾನು. ಇಲ್ಲದಿದ್ದರೆ ಇಂಥ ಚಟುವಟಿಕೆ ಮತ್ತೆ ಮತ್ತೆ ಮರುಕಳಿಸುತ್ತದೆ. ಇದನ್ನು ತಾವು ಮತ್ತು ಮಾನ್ಯ ಸಭಾನಾಯಕರು ಆಲೋಚಿಸಬೇಕು.

Dr. N.B. Nanjappa : According to Rule 325 of the Rules of Procedure:

"A member Shall not speak on a question after the Speaker has collected the voices both of the Ayes and of the Noes on that question".

Since morning they have violated everything according to this. So, everything must be removed from the record, because the Bill has been passed and these people have started making all sorts of dharana and all that. It must be removed according to this. They violated, by discussing in this House once agin that matter, according to Rule 325. This is my request.

ಉಪಾಧ್ಯಕ್ಷಿಣಿಯವರು : ಈಗ ಬಹಳ ಜನ ಸದಸ್ಯರು ಶ್ರೀಯುತ ವಾಟಾಳ್ ನಾಗರಾಜ್ ಅವರ ಬಗ್ಗೆ ಮಾತನಾಡಿದ ಕೆಲವು ಮಾತುಗಳನ್ನು ಕಡತದಿಂದ ತೆಗೆಸಬೇಕೆಂದು ಹೇಳಿದ್ದಾರೆ.

'He has created communal disharmony'. ಎಂದು ಏನು ಹೇಳಿದ್ದಾರೆ, ಅವನ್ನು ಕಡತದಿಂದ ತೆಗೆಸಬೇಕೆಂದು ಮಾನ್ಯ ಸಭಾನಾಯಕರು ಕೂಡ ಹೇಳಿದ್ದಾರೆ. ಇದರ ಬಗ್ಗೆ ನಾನು ರೆಕಾರ್ಡ್ ತರಿಸಿ ನೋಡಿ ಎಕ್ಸ್‌ಪಂಜ್ ಮಾಡುವುದಕ್ಕೆ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಇವತ್ತೇ ತೆಗೆಸಬೇಕು, ಈಗಲೇ ತೆಗೆಸಬೇಕು.

ಉಪಾಧ್ಯಕ್ಷಿಣಿಯವರು : ಆಯಿತು. ಈಗ ಗಮನ ಸೆಳೆಯುವ ಸೂಚನೆಗಳು.

ಗಮನ ಸೆಳೆಯುವ ಸೂಚನೆಗಳು

1) ರಾಜ್ಯದಲ್ಲಿ ಡಕಾಯಿತಿಗಳನ್ನು ನಿಯಂತ್ರಣ ಮಾಡುವುದರಲ್ಲಿ ಸರ್ಕಾರ ವಿಫಲವಾಗಿರುವ ಬಗ್ಗೆ:

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಡಕಾಯಿತಿಗಳನ್ನು ನಿಯಂತ್ರಣ ಮಾಡುವುದರಲ್ಲಿ ಸರ್ಕಾರ ವಿಫಲವಾಗಿರುವ ಬಗ್ಗೆ ಮಾನ್ಯ ಗೃಹಮಂತ್ರಿಯವರ ಗಮನ ಇಟ್ಟು ಸೆಳೆಯುತ್ತೇನೆ.